ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಬುಧವಾರ 4 ನೇ ನವೆಂಬರ್ 1998ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು : **(ಶ್ರೀ ರಮೇಶ್ ಕುಮಾರ್)** ಅವರು ಪೀಠವನ್ನು ಅಲಂಕರಿಸಿದ್ದರು.

ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆ

ಅಧ್ಯಕ್ಷರು : ಮಾನ್ಯ ಈಶ್ವರಪ್ಪನವರೇ, ತಾವು ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆಯನ್ನು ಮುಂದುವರೆಸಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾವು ಅವಿಶ್ವಾಸ ನಿರ್ಣಯದ ಬಗ್ಗೆ ಚರ್ಚೆಮಾಡುತ್ತಿದ್ದೇವೆ. ಇದರ ಜೊತೆಗೆ ಆಲಮಟ್ಟಿ ಅಣೆಕಟ್ಟೆಯ ಬಗ್ಗೆ ಸಹ ಬಹಳ ಪ್ರಮುಖವಾಗಿ ಚರ್ಚೆ ಮಾಡಬೇಕಾಗಿದೆ. ಮೇಲ್ಮನೆಯಲ್ಲಿ ಇದರ ಬಗ್ಗೆ ಚರ್ಚೆಯಾಗಿದೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಅವಿಶ್ವಾಸ ನಿರ್ಣಯದ ಬಗ್ಗೆ ಮೊದಲು ಚರ್ಚೆಯಾಗಬೇಕು. ಇವರು ಹೀಗೆ ಮಧ್ಯ ಮಧ್ಯೆ ಬೇರೆ ವಿಚಾರಗಳನ್ನು ತರುತ್ತಿರುವುದರಿಂದ ಅವಿಶ್ವಾಸ ನಿರ್ಣಯದ ಬಗೆಗಿನ ಮಹತ್ವವೇ ಹೊರಟು ಹೋಗುತ್ತದೆ. ಅವರು ಅವಿಶ್ವಾಸ ನಿರ್ಣಯದ ಬಗ್ಗೆ ಮಾತನಾಡುವಾಗ ಬೇಕಾದರೆ ಆಲಮಟ್ಟಿಯ ವಿಚಾರದ ಬಗ್ಗೆಯೇ ಮಾತನಾಡಲಿ. ನಿನ್ನೆಯ ಚರ್ಚೆ ದೇವರ ಬಗ್ಗೆಯೇ ಆಯಿತು.

ಅಧ್ಯಕ್ಷರು : ಇಂದು ನಾನು ಒಂದೇ ಒಂದು ನಿಮಿಷ ಬೇರೆ ವಿಚಾರವನ್ನು ಎತ್ತಲು ಅವಕಾಶ ಕೊಡುವುದಿಲ್ಲ. ಚರ್ಚೆಯು ಅವಿಶ್ವಾಸ ನಿರ್ಣಯದ ಬಗ್ಗೆ ಬಿಟ್ಟು ಬೇರೆ ಅಲ್ಲಿ ಇಲ್ಲಿ ಹೋಗಲು ಬಿಡುತ್ತಿಲ್ಲ. ವಿಧಾನಪರಿಷತ್‌ನಲ್ಲಿ ಆಲಮಟ್ಟಿಯ ವಿಚಾರ ಪ್ರಸ್ತಾಪವಾಗಿಬಿಟ್ಟಿದೆ. ಬೇರೆ ವಿಚಾರ ಬಂದರೆ ಅವಿಶ್ವಾಸ ನಿರ್ಣಯದ ಚರ್ಚೆಗೆ ತೊಂದರೆಯಾಗುತ್ತದೆ. ಅದು ಆಗುವುದು ಬೇಡ. ಮಾನ್ಯ ವಾಟಾಳ್‌ರವರೆ, ತಾವು ಆಲಮಟ್ಟಿಯ ವಿಚಾರವನ್ನು ಹೇಳಿಬಿಟ್ಟಿದ್ದೀರಿ, ಅದು ದಾಖಲೆಗೆ ಹೋಗಿದೆ, ಅದರ ಬಗ್ಗೆ ಅನಂತರ ಚರ್ಚೆಗೆ ಅವಕಾಶ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ದಾಖಲೆಗೆ ಹೋಗುವುದು ಬಿಡುವುದು ಬೇರೆ ಪ್ರಶ್ನೆ. ವಿಧಾನ ಪರಿಷತ್‌ನಲ್ಲಿ ಆಲಮಟ್ಟಿಯ ಬಗ್ಗೆ ಚರ್ಚೆಯಾಗಿದೆ, ಸದಸ್ಯರುಗಳು ಸಭಾತ್ಯಾಗ ಮಾಡಿದ್ದಾರೆ, ಧರಣಿ

ಮಾಡಿದ್ದಾರೆ. ಈ ಸದನಕ್ಕೆ ಸಂಬಂಧಪಟ್ಟ ಸಚಿವರು ಬಂದು ಹೋಗಿದ್ದಾರೆ, ಆದರೆ ಅವರು ಅದಕ್ಕೆ ಸಂಬಂಧಪಟ್ಟ ಹೇಳಿಕೆಯನ್ನೂ ಕೊಟ್ಟಿಲ್ಲ. ಸುಪ್ರೀಮ್ ಕೋರ್ಟ್‌ನವರು ಆಲಮಟ್ಟಿಗೆ ಗೇಟನ್ನು ಅಳವಡಿಸುವುದಕ್ಕೆ ತಡೆಯಾಜ್ಞೆ ನೀಡಿದ್ದಾರೆ. ಅಲ್ಲಿನ ಕಾಮಗಾರಿಗಳು ನಿಂತುಹೋಗಿದೆ. ಈ ಪರಿಸ್ಥಿತಿಯಲ್ಲಿ ರಾಜ್ಯವು ಕಗ್ಗತ್ತಲಾಗಿದೆ. ಇದರ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈ ವಿಚಾರವನ್ನು ಶೂನ್ಯ ವೇಳೆಯಲ್ಲಿ ತೆಗೆದುಕೊಳ್ಳಿಯೆಂದು ನಾನು ಬರೆದೇ ಕೊಟ್ಟಿದ್ದೇನೆ. ಮಧ್ಯ ಎದ್ದು ಮಾತನಾಡಬಾರದೆಂದು ನಾನು ಸುಮ್ಮನೆ ಕುಳಿತಿದ್ದೇನೆ. ಅವಿಶ್ವಾಸ ನಿರ್ಣಯದ ಮೇಲೆ ಅವರು ಮಾತನಾಡುವಾಗ ಬೇಕಾದರೆ ಅದರ ಬಗ್ಗೆ ಮಾತನಾಡಲಿ. ಆಲಮಟ್ಟಿಯದನ್ನೇ ಪ್ರಮುಖವಾದ ವಿಚಾರವಾಗಿ ತೆಗೆದುಕೊಂಡು ಮಾತನಾಡಲಿ.

ಶ್ರೀ ವಾಟಾಳ್ ನಾಗರಾಜ್ : ವಿರೋಧ ಪಕ್ಷದವರು ಈ ರೀತಿ ಹೇಳಿದರೆ ನಾವೇನು ಮಾಡೋಣ. ತಾವೇ ಬರೆದುಕೊಟ್ಟಿರುವಾಗ ಆಲಮಟ್ಟಿಯ ಬಗ್ಗೆ ತಾವೇ ಮೊದಲು ಪ್ರಾರಂಭ ಮಾಡಿ. ನಾನು ಕೊನೆಯಲ್ಲಿ ಹೇಳುತ್ತೇನೆ. ಇದರಲ್ಲಿ ನನ್ನದ್ಯಾವುದೂ ಮಡಿವಂತಿಕೆ ಇಲ್ಲ. ನಾನು ಇದರ ಬಗ್ಗೆ ಮೊದಲು ಮಾತನಾಡಿದೆಯೆಂದು ಜಿಜ್ಞಾಸೆ ಬರುವುದು ಬೇಡ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವಿಶ್ವಾಸ ನಿರ್ಣಯದ ಬಗ್ಗೆ ಚರ್ಚೆ ಇರುವಾಗ ಇದರಲ್ಲಿ ಏನು ಮಾತನಾಡಬೇಕು ಏನು ಮಾತನಾಡಬಾರದು ಎಂಬ ಬಗ್ಗೆ ನೋಡದಿದ್ದರೆ ಅವಿಶ್ವಾಸ ನಿರ್ಣಯಕ್ಕೆ ಇರುವ ಮಹತ್ವವೇ ಹೊರಟುಹೋಗುತ್ತದೆ. ನನಗೆ ತಿಳಿದಂತೆ ಇಡೀ ಸದನದಲ್ಲಿ ತಮಗೆ ಸಿಗುವಷ್ಟು ಅವಕಾಶ ಮತ್ತಾರಿಗೂ ಸಿಗುತ್ತಿಲ್ಲ. ತಮಗೆ ಆ ರೀತಿ ಮಾಡನಾಡುವ ಅವಕಾಶ ಸಿಗಬಾರದೆಂದು ನಮ್ಮ ಉದ್ದೇಶವೂ ಇಲ್ಲ. ಬೇಕಾದರೆ ತಾವು ಇನ್ನೂ ಮಾತನಾಡಿ. ನನ್ನ ಉದ್ದೇಶವೇನೆಂದರೆ ಅವಿಶ್ವಾಸ ನಿರ್ಣಯದ ಮಹತ್ವ ಕಳೆದುಕೊಳ್ಳಬಾರದು. ಹೊರಗಡೆಯ ಜನರು ನಗುತ್ತಿದ್ದಾರೆ. ಒಂದು ಕಡೆ ಅವಿಶ್ವಾಸ ನಿರ್ಣಯವನ್ನು ಪಾಸ್ ಮಾಡುತ್ತಾರೆ, ಮತ್ತೊಂದು ಕಡೆ ದೇವರಿಗೋಸ್ಕರ ಚರ್ಚೆ ಮಾಡಲು ವಿಧಾನಸಭೆಯನ್ನು ಕರೆಯುತ್ತಾರೆ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಾರೆಂದು ರಾಜಕೀಯ ವ್ಯಕ್ತಿಗಳಲ್ಲದೆ ಬೇರೆ ಬೇರೆ ವ್ಯಕ್ತಿಗಳು ನಮಗೆ ದೂರವಾಣಿಯಲ್ಲಿ ಕೇಳುತ್ತಿದ್ದಾರೆ.

ಅಧ್ಯಕ್ಷರು : ಮಾನ್ಯ ಈಶ್ವರಪ್ಪನವರೇ, ತಾವು ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆಯನ್ನು ಮುಂದುವರೆಸಿ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ಶೂನ್ಯ ವೇಳೆಯಲ್ಲಿ ಒಂದು ವಿಚಾರವನ್ನು ಪ್ರಸ್ತಾಪ ಮಾಡಲು ಕಳುಹಿಸಿದ್ದೆ, ದಯಮಾಡಿ ನನಗೆ ಅವಕಾಶ ಕೊಡಿ. ತಾವು ಎಲ್ಲರಿಗೂ ಅವಕಾಶ ಕೊಡುತ್ತೀರಿ, ನನಗೇಕೆ ಅವಕಾಶ ಕೊಡುವುದಿಲ್ಲ?

ಅಧ್ಯಕ್ಷರು : ಅವರು ಚರ್ಚೆಯನ್ನು ಪ್ರಾರಂಭ ಮಾಡಲಿ, ಅನಂತರ ತಮಗೆ ಅವಕಾಶ ಕೊಡುತ್ತೇನೆ. ಇಂದು ಶೂನ್ಯ ವೇಳೆ ಇಲ್ಲ. ತಾವು ಅನಂತರ ನನ್ನ ಕೊಠಡಿಗೆ ಬನ್ನಿ ತಮಗೆ ಸಮಯವನ್ನು ನಿಗದಿ ಮಾಡುತ್ತೇನೆ.

7444-739

ಶ್ರೀ ವೈಜನಾಥ್ ಪಾಟೀಲ್ : ಈ ದೇಶದ ಜನಸಂಖ್ಯೆಯಲ್ಲಿ 70ಕ್ಕಿಂತ ಹೆಚ್ಚು ಜನರು ಹಳ್ಳಿಗಳಲ್ಲಿ ಇದ್ದಾರೆ. ಆದರೆ ಹಳ್ಳಿಯ ಮಕ್ಕಳಿಗೆ 15 ಪರ್‌ಸೆಂಟ್, ಪಟ್ಟಣದ ಮಕ್ಕಳಿಗೆ 85 ಪರ್‌ಸೆಂಟ್ ಮೀಸಲಾತಿಯನ್ನು ಮೆಡಿಕಲ್ ಮತ್ತು ಇಂಜಿನಿಯರಿಂಗ್ ಸೀಟಿನಲ್ಲಿ ಸರ್ಕಾರ ಮಾಡಿದೆ. ಯಾವುದೇ ಕಾನೂನು, ನಿಯಮಗಳು ಇಲ್ಲವಾಗಿದೆ.

ಅಧ್ಯಕ್ಷರು : ತಾವು ಮತ್ತು ಗುರುನಾಥ್‌ರವರು ಅನಂತರ ನನ್ನ ಕೊಠಡಿಗೆ ಬನ್ನಿ. ತಮ್ಮ ವಿಚಾರದ ಬಗ್ಗೆ ಚರ್ಚೆಗೆ ಸಮಯವನ್ನು ನಿಗದಿ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವಿಶ್ವಾಸ ನಿರ್ಣಯದ ಮೇಲೆ ಮಾನ್ಯ ಈಶ್ವರಪ್ಪನವರು ಚರ್ಚೆಯನ್ನು ಮುಂದುವರೆಸಲಿ. ಆ ಪ್ರಸ್ತಾವದ ಮೇಲೆ ಅವರಿಗೆ ಸಪೋರ್ಟ್ ಮಾಡಲು ಅವಕಾಶ ಮಾಡಿಕೊಡಿ. ಈ ಎಲ್ಲಾ ವಿಚಾರಗಳನ್ನು ಬಿಚ್ಚಿ ಬಿಚ್ಚಿ ಹೇಳುತ್ತಾರೆ.

ಶ್ರೀ ವೈಜನಾಥ್ ಪಾಟೀಲ್ : ನಾನು ಶೂನ್ಯ ವೇಳೆಯಲ್ಲಿ ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ಮೊನ್ನೆ ಹೀಗೆಯೇ ಮಾತನಾಡಲು ಹೋದಾಗ, ಯಾರು ಸಹಿ ಮಾಡಿದ್ದಾರೆ ಅವರು ಮಾತ್ರ ಮಾತನಾಡಬೇಕೆಂದು ಹೇಳಿದಿರಿ, ಅನಂತರ ಬಿ.ಆರ್. ಯಾವಗಲ್‌ರವರು ಮಾತನಾಡಲು ನಿಂತಿದ್ದಾರೆ. ಅವರಿಗೆ ಅವಕಾಶ ಕೊಡಬೇಕೆಂದು ಹೇಳಿದಿರಿ, ಹಾಗಾದರೆ ನಾವೇನು ಕೈ ಮೇಲೆ ನಿಂತಿದ್ದೇವೆಯೇ, ನಾವೂ ಕಾಲುಮೇಲೆ ನಿಂತಿದ್ದೇವೆ. ನಮಗೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

ಅಧ್ಯಕ್ಷರು : ಮೊನ್ನೆ ತಾವು ನಿಲುವಳಿ ಸೂಚನೆಯ ಮೇಲೆ ಮಾತನಾಡಬೇಕೆಂದು ಕೇಳಿದ್ದು. ನಿಲುವಳಿ ಸೂಚನೆಯ ಮೇಲೆ ಮಾತನಾಡಲು ತಮಗೆ ನಿಯಮದಲ್ಲಿ ಅವಕಾಶವಿಲ್ಲ. ನಿಲುವಳಿ ಸೂಚನೆಯನ್ನು ವಿರೋಧ ಪಕ್ಷದವರು ಕೊಡುತ್ತಾರೆ. ತಾವು ಎತ್ತಿರುವ ವಿಚಾರದ ಬಗ್ಗೆ ಅನಂತರ ಸಮಯವನ್ನು ನಿಗದಿ ಮಾಡುತ್ತೇನೆ. ತಾವು ನನ್ನ ಕೊಠಡಿಗೆ ಬನ್ನಿ ಚರ್ಚೆ ಮಾಡೋಣ. ಮಾನ್ಯ ಈಶ್ವರಪ್ಪನವರು ಮಾತನಾಡುವಾಗ ಯಾರೂ ಮಧ್ಯ ಮಧ್ಯ ಎದ್ದು ಮಾತನಾಡಬಾರದು, ಸಚಿವರುಗಳು ಉತ್ತರವನ್ನು ಕೊಡುವುದಿದ್ದರೆ ಕೊನೆಯಲ್ಲಿ ಜನರಲ್ ಆಗಿ ಉತ್ತರವನ್ನು ಕೊಡಬೇಕಾದರೆ ಹೇಳಬಹುದು. ಮಾನ್ಯ ಈಶ್ವರಪ್ಪನವರೇ, ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆಯನ್ನು ಮುಂದುವರೆಸಿ.

+ ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಅವಿಶ್ವಾಸ ನಿರ್ಣಯದ ಬಗ್ಗೆ ಚರ್ಚೆ ಆಗುತ್ತಿದೆಯೋ ಇಲ್ಲವೋ ಎಂಬ ಬಗ್ಗೆ ಅನುಮಾನ ನನಗೆ ಮತ್ತು ರಾಜ್ಯದ ಜನರಿಗೆ ಬಂದಿದೆ. ನಿನ್ನೆ ಆಗಿರುವ ಘಟನೆಯಿಂದಾಗಿ ನನಗೆ ತುಂಬಾ ನೋವಾಗಿದೆ. ಇದರ ಬಗ್ಗೆ ನಾನು ಹೆಚ್ಚು ಮಾತನಾಡಲು ಹೋಗುವುದಿಲ್ಲ. ನಿನ್ನೆ ಅವಿಶ್ವಾಸ ನಿರ್ಣಯದ ಬಗ್ಗೆ ಚರ್ಚೆ ಪ್ರಾರಂಭವಾಗಿದ್ದು 3 ಗಂಟೆ 50 ನಿಮಿಷಕ್ಕೆ. ಸುಮಾರು ಒಂದೂವರೆ ಘಂಟೆ ದೇವರ ಬಗ್ಗೆ ಟೀಕೆಯಾಯಿತು. ಇಲ್ಲಿ ನಡವಳಿಕೆ ಹೋಗುತ್ತಿರುವುದನ್ನು ನೋಡಿದರೆ ವಿಧಾನಸಭೆ ಏತಕ್ಕಾಗಿ ಇದೆಯೆನ್ನತಕ್ಕ ಅನುಮಾನ ನನಗೆ ಬಂದಿದೆ. ಇದರಿಂದ ನನಗೆ ತುಂಬಾ ನೋವಾಗಿದೆ. ಅವಿಶ್ವಾಸ ನಿರ್ಣಯದ ಬಗ್ಗೆ ಚರ್ಚೆಯಾದ ಮೇಲೆ ಕೊನೆಯಲ್ಲಿ ಮಂತ್ರಿಗಳು ಉತ್ತರ ಕೊಡುವ ಪದ್ಧತಿ ಇದೆ. ಬಿ.ಜೆ.ಪಿ. ಶಾಸಕಾಂಗ ಪಕ್ಷದ ನಾಯಕನಾಗಿ ನಾನೇ ಸಾಕಷ್ಟು ಸಮಯ ತೆಗೆದುಕೊಂಡೆ ಎಂಬ ನೋವು ನನಗಿದೆ ಮತ್ತು ನನ್ನ ಪಕ್ಷದ ಇತರೆ ಶಾಸಕರಿಗೂ ಮಾತನಾಡಲು

ಅವಕಾಶ ಕೊಡಬೇಕು ಎಂಬ ಆಸೆ ಕೂಡ ಇದೆ. ನಿನ್ನೆ ಅವಿಶ್ವಾಸ ನಿರ್ಣಯದ ಬಗ್ಗೆ ನಡೆದಂಥ ರೀತಿ, ಪದ್ಧತಿ ಬಗ್ಗೆ ನನಗೆ ಬಹಳ ನೋವು ಉಂಟಾಗಿದೆ. ಇನ್ನೆಂದು ಆ ರೀತಿಯಾಗದಂತೆ ತಾವು ನೋಡಿಕೊಳ್ಳಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತು ನನ್ನ ಬೇರೆ ಸದಸ್ಯರುಗಳಿಗೆ ಮಾತನಾಡಲು ಅವಕಾಶ ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಅವಿಶ್ವಾಸ ನಿರ್ಣಯದ ಮೇಲೆ ತಮ್ಮ ಚರ್ಚೆ ಮುಗಿಯಿತೇ?

ಶ್ರೀ ಕೆ.ಎಸ್. ಈಶ್ವರಪ್ಪ : ನಿನ್ನೆ ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆಯು 3.50ಕ್ಕೆ ಪ್ರಾರಂಭವಾಗಿ 7 ಗಂಟೆಗೆ ಮುಗಿಯಿತು. ಅದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಂಥ ಸಂದರ್ಭದಲ್ಲಿ ಪ್ರತಿಯೊಬ್ಬರೂ ಮಧ್ಯ ಪ್ರವೇಶ ಮಾಡಿ ಮಾತನಾಡುತ್ತಿದ್ದರು. ದೇವರ ಬಗ್ಗೆ ಈ ರಾಷ್ಟ್ರದಲ್ಲಿನ ಇತಿಹಾಸದಲ್ಲಿ ಯಾವಾಗಲೂ ಟೀಕೆಯಾದಷ್ಟು ಟೀಕೆಗಳು ಇಲ್ಲಿ ಸುಮಾರು ಒಂದೂವರೆ ಗಂಟೆಗಳ ಕಾಲ ಆಯಿತು. ಆದ್ದರಿಂದ ಅವಿಶ್ವಾಸ ನಿರ್ಣಯದ ಬಗ್ಗೆ ಮಾತನಾಡಲು ಅವಕಾಶವೇ ಸಿಗಲಿಲ್ಲ. ಅನೇಕ ಪತ್ರಿಕೆಯವರು ದೇವರ ಬಗ್ಗೆ ವಿಶ್ವಾಸ ಕೋರಿ ಚರ್ಚೆ ನಡೆದಿದೆಯೇ ಎಂದು ಬರೆದಿದ್ದಾರೆ.

ಅಧ್ಯಕ್ಷರು : ಪತ್ರಿಕೆಯವರು ಸಾವಿರ ಬರೆಯುತ್ತಾರೆ. ಪತ್ರಿಕೆಯವರ ಅಭಿಪ್ರಾಯಕಲ್ಲ ನಾವಿಲ್ಲಿರುವುದು. ಇಲ್ಲಿ 224 ಜನ ಸದಸ್ಯರುಗಳು ಅರಿಸಿ ಬಂದಿರುತ್ತಾರೆ. ಅನೇಕ ಪಕ್ಷಗಳಿಗೆ, ಅನೇಕ ಸಿದ್ಧಾಂತಗಳಿಗೆ, ಅನೇಕ ಹಿನ್ನೆಲೆಯಿಂದ ಬಂದಿರುತ್ತಾರೆ. ಇಲ್ಲಿನ ಚರ್ಚೆಯಲ್ಲಿ ಹೆಜ್ಜೆ ಹೆಜ್ಜೆಯನ್ನಿಟ್ಟುಕೊಂಡು ಹೋಗಲು ಆಗುವುದಿಲ್ಲ. ಸಾಂದರ್ಭಿಕವಾಗಿ ಅನೇಕ ವಿಚಾರಗಳು ಚರ್ಚೆಗೆ ಬರುತ್ತದೆ. ಕರ್ನಾಟಕದಲ್ಲಿ ಮಾತ್ರವಲ್ಲ, ಭಾರತದಲ್ಲಿ, ಪ್ರಪಂಚದಲ್ಲಿ ಎಲ್ಲೂ ಸಹ ಸಂಸತ್ತಿನಲ್ಲಿ, ವಿಧಾನಸಭೆಗಳಲ್ಲಿ ಚರ್ಚೆ ಮಾಡತಕ್ಕ ಸಮಯದಲ್ಲಿ ಈ ರೀತಿ ಬೇರೆ ಬೇರೆ ವಿಚಾರಗಳು ಬರತಕ್ಕದ್ದು ಸಹಜ, ಚರ್ಚೆ ಮಾಡತಕ್ಕದ್ದು ಸಹಜ. ನಿನ್ನೆ ನಾವುಗಳೇನೋ ಸಮಯವನ್ನು ವ್ಯರ್ಥಮಾಡಿ ಉಡಾಫೆಗೋಸ್ಕರ ಕೆಲಸ ಮಾಡಿದ್ದೇವೆ ಎಂಬುದನ್ನು ಈ ಮಾತುಗಳ ಮೂಲಕ ಹೇಳುವುದು ಬೇಡ. ಅದು ಒಂದು ಸಿದ್ಧಾಂತಕ್ಕೆ ಸಂಬಂಧಿಸಿದ ವಿಚಾರ, ಒಂದು ತತ್ವಕ್ಕೆ ಸಂಬಂಧಿಸಿದ ವಿಚಾರ. ನಂಬಿಕೆ, ಅಪನಂಬಿಕೆಗಳು ಇದ್ದೇ ಇರುತ್ತವೆ. ಒಬ್ಬರ ಆಹಾರ ಇನ್ನೊಬ್ಬರಿಗೆ ವಿಷವಾಗಬಹುದು. ಇದರಲ್ಲೇನಿದೆ ತಪ್ಪು? ನಾವು ಕುಳಿತುಕೊಂಡು ಚರ್ಚೆ ಮಾಡಿದ್ದೇವೆ, ಇವತ್ತೂ ಚರ್ಚೆ ಮಾಡೋಣ. ನಾನು ನಿಮಗೆ ನಿನ್ನೆ ಹೇಳಿದೆ, ನೀವು ನಿಮ್ಮ ಭಾಷಣವನ್ನು ಇಲ್ಲಿಗೆ ಮುಗಿಸಿ, ನಾಳೆ ನಿಮಗೆ ಮುಂದುವರೆಸುವುದಕ್ಕೆ ನಾನು ಅವಕಾಶ ಕೊಡುತ್ತೇನೆ, ನಿಮಗೆ ಸಮಯದ ಕೊರತೆ ಉಂಟಾಗುವುದಿಲ್ಲ ಎಂದು ಹೇಳಿದೆ. ಇವರು ಮಾತನಾಡುವ ವೇಳೆಗೂ ಹೇಳಿದೆ, ನಿಮ್ಮ ಸದಸ್ಯರು ಬೇರೆ ಇನ್ಯಾರಿದ್ದಾರೆ, ಅವರು ಪಟ್ಟಿಯನ್ನೂ ಸಹಾ ಕೊಡಿ, ಅವರಿಗೂ ಅವಕಾಶ ಮಾಡಿಕೊಡುತ್ತೇನೆ. ಪತ್ರಿಕೆಯವರು ಇನ್ನೂ ಬಹಳ ಬರೆದಿದ್ದಾರೆ .....

ಶ್ರೀ ಕೆ.ಎಸ್. ಈಶ್ವರಪ್ಪ : ಅಧ್ಯಕ್ಷರೇ, ನಾನು ಪತ್ರಿಕೆಯದೊಂದೇ ವಿಚಾರ ಹೇಳಲಿಲ್ಲ.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರು, ಮಾನ್ಯ ಖರ್ಗೆಯವರು ಹಾಗೂ ಮಾನ್ಯ ವಾಟಾಳ್ ನಾಗರಾಜ್‌ರವರು ಹಾಗೂ ನಾನು ಸ್ವಂತ ದುಡ್ಡನ್ನು ಹಾಕಿಕೊಂಡು ವಿದೇಶ ಪ್ರಯಾಣಕ್ಕೆ ಹೋಗಿ ಬಂದರೆ, ಯಾರೋ ಆಂಧ್ರದ ಹೆಂಡದ ಕಾಂಟ್ರಾಕ್ಟರ್ ದುಡ್ಡು ಕೊಟ್ಟರು, ಅವರ ದುಡ್ಡಿನಲ್ಲಿ

ಇವರು ವಿದೇಶಕ್ಕೆ ಮಜಾ ಮಾಡಲಿಕ್ಕೆ ಹೋಗಿದ್ದಾರೆ ಎಂದು ಪತ್ರಿಕೆಯವರು ಬರೆದರು. ಮಜಾ ಮಾಡಲು ಹೋದವರ ವಿಚಾರವನ್ನು ಇವರು ಬರೆಯಲೇ ಇಲ್ಲ. ಹಾಗಾದರೆ ನಾವೇನು ಫಾರಿನ್‌ಗೆ ಹೋಗುವುದು ಬೇಡವೇ? ರೋಟರಿ ಕ್ಲಬ್‌ನವರು ಹೋಗಬಹುದು, ಲಯನ್ಸ್ ಕ್ಲಬ್‌ನವರು ಹೋಗಬಹುದು, ವ್ಯಾಪಾರ ಮಾಡುವವರೆಲ್ಲಾ ವಿದೇಶಕ್ಕೆ ಹೋಗಬಹುದು, ನಾವು ಲೆಜಿಸ್ಲೇಟರ್ಸ್ ಆದ ತಪ್ಪಿಗೆ ನಾವು ಎಲ್ಲೂ ವಿದೇಶ ಪ್ರಯಾಣ ಮಾಡುವಂತಿಲ್ಲವೇ? ನಾವು ಇಲ್ಲೇ ಫುಟ್‌ಪಾತ್‌ನಲ್ಲಿ ಚಿತ್ರಾನ್ನ ತಿಂದುಕೊಂಡು ಇರಬೇಕೇ?

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ನಾನು ಹೇಳಲಿಕ್ಕೆ ಹೊರಟಿದ್ದೇ ಬೇರೆ, ತಾವು ತೆಗೆದುಕೊಂಡು ಹೋಗುತ್ತಿರುವ ದಾರಿಯೇ ಬೇರೆ. ನಾನು ಅದನ್ನು ಹೇಳುವುದಕ್ಕೆ ಹೋಗುತ್ತಿಲ್ಲ. ಒಬ್ಬ ಅವಿಶ್ವಾಸ ನಿರ್ಣಯದ ಬಗ್ಗೆ .....

ಅಧ್ಯಕ್ಷರು : ಇಲ್ಲಿ ಗೌರವ ಕೊಡಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ : ಸಾರ್, ತಾವು ನನಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡದೇ ಹೋದರೆ ನಾನೇನು ಮಾಡಲಿ?

ಅಧ್ಯಕ್ಷರು : ಆಯಿತು ಹೇಳಿ. ನೀವು ಆಗಲೇ ಕುಳಿತು ಬಿಟ್ಟಿರಲ್ಲಾ.

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಕುಳಿತು ಮತ್ತೆ ನಿಂತೆ.

ಅಧ್ಯಕ್ಷರು : ಅದಕ್ಕೇ ಹೇಳಿದ್ದು ನಾನು, ಮಾತನಾಡಿ ಎಂದರೆ ನಾನು ಮಾತನಾಡುವುದಿಲ್ಲ ಎಂದು ಕುಳಿತುಬಿಟ್ಟರೆ ನಾನೇನು ಮಾಡಲಿ?

ಶ್ರೀ ಕೆ.ಎಸ್. ಈಶ್ವರಪ್ಪ : ಅಧ್ಯಕ್ಷರೇ, ಏತಕ್ಕೆ ನಾನು ಕುಳಿತುಬಿಟ್ಟೆ ಎಂದು ನಾನು ನಿಮಗೆ ಹೇಳುವುದಕ್ಕೆ ಹೊರಟಿದ್ದೆ. ಅವಿಶ್ವಾಸದ ಬಗ್ಗೆ ಮಾತನಾಡುವುದಕ್ಕೆ ನನ್ನ ಹತ್ತಿರ ಸಾಕಷ್ಟು ಇದೆ.

ಅಧ್ಯಕ್ಷರು : ಮಾತನಾಡಿ ಈಗ. ಇನ್ನೂ ಎರಡು ಗಂಟೆ ಬೇಕಾದರೂ ಮಾತನಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ಸ್ವಲ್ಪ ದಯವಿಟ್ಟು ನಾನು ಹೇಳುವುದನ್ನು ಕೇಳಿ. ತಾವೂ ಹೀಗೆ ಸಿಟ್ಟಾದರೆ ಹೇಗೆ ಸಾರ್? ನನ್ನ ಮನಸ್ಸಿನಲ್ಲಿದ್ದ ಭಾವನೆಗಳನ್ನು .....

ಅಧ್ಯಕ್ಷರು : ಅಸೆಂಬ್ಲಿಯಲ್ಲಿ ನಿನ್ನೆ ನಡೆದ ಕಲಾಪದಲ್ಲಿ ನೀವೆಲ್ಲರೂ ಕೂಡ ಭಾಗವಹಿಸಿ, ಇವತ್ತು ವಾಪಸ್ ಬಂದು, ನಿನ್ನೆ ನಡೆದ ಕಲಾಪದ ಬಗ್ಗೆ ಈಗ ಚರ್ಚೆ ಮಾಡಿದರೆ ಹೇಗೆ? ಎಲ್ಲೂ ಈ ತರಹ ನಡೆದಿಲ್ಲ, ಇದೊಂದು ದೊಡ್ಡ ಅಪಕೀರ್ತಿ ಎನ್ನುವ ತರಹ ಮಾತನಾಡಿದರೆ .....

ಶ್ರೀ ಕೆ.ಎಸ್. ಈಶ್ವರಪ್ಪ : ಆ ಮಾತನ್ನು ಏತಕ್ಕೆ ಹೇಳುವುದಕ್ಕೆ ಹೊರಟಿದ್ದೆ ಎಂದರೆ, ...

ಅಧ್ಯಕ್ಷರು : ಪ್ರಿಸೈಡಿಂಗ್ ಆಫೀಸರ್ ಆಗಿದ್ದ ನನ್ನ ಮೇಲೆ ಅದು ರಿಫ್ಲೆಕ್ಟ್ ಆಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ : ನಿಮಗೆ ಆಗುತ್ತದೆ ಎಂದೇ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ .....

ಅಧ್ಯಕ್ಷರು : ಹೌದು, ನಾನು ಪ್ರಜ್ಞೆ ಇದ್ದೇ ನಿನ್ನೆ ಕಲಾಪವನ್ನು ನಡೆಸಿದ್ದೇನೆ. ಆ ವಿಚಾರ ಚರ್ಚೆಯಾಗಲಿ ಎಂದು ನಾನು ಕಲಾಪ ನಡೆಸಿದ್ದೇನೆ. ಆ ಸಮಯ ನಾನು ನಿಮಗೆ ಅಡ್ವೈಸ್ಸ್ ಮಾಡಿ ಕೊಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ನಿಮ್ಮ ಪ್ರಜ್ಞೆ ಬಗ್ಗೆ ಪ್ರಶ್ನೆ ಮಾಡುವಷ್ಟು ನಾನು ದೊಡ್ಡವನಲ್ಲ. ನಾನೇನು ಹೇಳಲಿಕ್ಕೆ ಹೊರಟಿದ್ದೆ ಎಂದರೆ, ನಾನು ಒಂದಿಷ್ಟು ವಿಚಾರಕ್ಕೆ ಸಿದ್ಧತೆ ಮಾಡಿಕೊಂಡು ಒಂದು ದಾರಿಯಲ್ಲಿ ಹೋಗುತ್ತಾ ಇರುತ್ತೇನೆ. ತಾವು ನನಗೆ ರಕ್ಷಣೆ ಕೊಡಬೇಕಾದ್ದು ಹೇಗೆ ಅಂತಂದರೆ, ನಾನು ಯಾವ ಒಂದು ವಿಚಾರದಲ್ಲಿ ಹೋಗುತ್ತಿರುತ್ತೇನೋ ಆ ಸಂದರ್ಭದಲ್ಲಿ ಯಾರ್ಯಾರು ಅಡ್ಡ ಬರುತ್ತಾರೋ ಅವರಿಂದ ತಾವು ನನಗೆ ರಕ್ಷಣೆ ಕೊಡಬೇಕಾದುದು ತಮ್ಮ ಕರ್ತವ್ಯ ಕೂಡ ಇತ್ತು. ಪ್ರಾರಂಭದಿಂದ ಕೊನೆಯವರೆಗೂ ಕೂಡ ನನ್ನ ದಾರಿಯಲ್ಲಿ ನಾನು ಹೋಗುವುದಕ್ಕೆ ಅವಕಾಶ ಆಗಲೇ ಇಲ್ಲ. ಕೊನೆಗೆ ಸರಸ್ವತಿ ವಂದನಾ ವಿಷಯ ಪ್ರಸ್ತಾಪವಾಗುತ್ತಿದ್ದಂತೆ ಈ ದೇಶದಲ್ಲಿ ಇರುವಂತಹ ದೇವರುಗಳಿಗೆ ಯಾವ ಯಾವ ಭಾಷೆಯಲ್ಲಿ ಯಾರ್ಯಾರೋ ಬಯ್ಯಬೇಕೋ ಅವರುಗಳಿಗೆಲ್ಲಾ ಅವಕಾಶ ಆಯಿತು. ಅಷ್ಟೂ ಜನ ಬೈದು ತಮ್ಮ ಚಟ ತೀರಿಸಿಕೊಂಡು ಬಿಟ್ಟರು. ನಾನು ಅದರ ಬಗ್ಗೆ ಹೋಗುವುದಕ್ಕೆ ಇಷ್ಟ ಪಡುತ್ತಿಲ್ಲ. ನಾನು ಏತಕ್ಕೆ.....

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈಶ್ವರಪ್ಪನವರೇ ಬಯ್ಯಬಾರದಂತಹ ಮಾತನ್ನು ಬೈದಿದ್ದಾರೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ಅವರಿಗೆ ಏನು ಬೇಕಾಗಿದೆಯೋ ಅದನ್ನು ಅವರು ಹೇಳಲು ಅವಕಾಶ ಮಾಡಿಕೊಡಿ. ನಿಮ್ಮ ಹಕ್ಕಿಗೆ ನಾನು ಅಡ್ಡ ಬರುವುದಿಲ್ಲ. ಇನ್ನು ಇದರ ಮೇಲೆ ಗೈಡ್ ಮಾಡುವುದಕ್ಕೆ ನನ್ನಿಂದ ಸಾಧ್ಯವಿಲ್ಲ. ನೀವೇನು ಹೇಳಬೇಕೆಂದಿದ್ದೀರೋ ಅದನ್ನು ಹೇಳಿ, ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಅವಿಶ್ವಾಸದ ಬಗ್ಗೆ ಸರಿಯಾದ ದಿಕ್ಕಿನಲ್ಲಿ ನಾವು ಹೋಗುತ್ತಿದ್ದೇವೆಂದು ನನಗೆ ನಿನ್ನೆ ಅನ್ನಿಸಲಿಲ್ಲ. ಅವಿಶ್ವಾಸ ನಿರ್ಣಯಕ್ಕೆ ಏನು ಮಹತ್ವ ಸಿಗಬೇಕಾಗಿತ್ತೋ ಅದು ಸಿಗುತ್ತಿಲ್ಲ. ಅವಿಶ್ವಾಸ ನಿರ್ಣಯದ ಬಗ್ಗೆ ನಿನ್ನೆ ಚರ್ಚೆ ಆರಂಭವಾಗಿದ್ದೇ ಮಧ್ಯಾಹ್ನ 3.45ಕ್ಕೆ. ದೇವರ ಬಗ್ಗೆ ಚರ್ಚೆ ಪ್ರಾರಂಭವಾಗಿದ್ದು 5.15ಕ್ಕೆ. ಅದು ಕೊನೆಯವರೆಗೂ ಎಳೆದುಕೊಂಡೇ ಹೋಯಿತು. ಇದಕ್ಕೋಸ್ಕರ ರಾಜ್ಯದ ಜನ ನಮ್ಮನ್ನು ಇಲ್ಲಿಗೆ ಕಳುಹಿಸಿದ್ದಾರೆಯೇ ? ಈ ರಾಜ್ಯ ಸರ್ಕಾರ ....

ಅಧ್ಯಕ್ಷರು : ಒಂದು ನಿಮಿಷ, ಅಷ್ಟು ಕಟ್ಟುನಿಟ್ಟಾಗಿ ಪ್ರಸ್ತಾಪ ಮಾಡಿದ್ದು ನಿಜ. ಅಜೆಂಡಾದಲ್ಲಿ ಏನು ವಿಚಾರ ಇರುತ್ತದೆಯೋ ಅದಕ್ಕೇ ನಿಲ್ಲಬೇಕೆಂಬ ಸಂಪ್ರದಾಯಕ್ಕೆ ಈ ಕ್ಷಣದಲ್ಲಿ ನೀವೆಲ್ಲರೂ ಬಂದರೆ, ಅದನ್ನೂ ನಡೆಸತಕ್ಕಂತಹ ಚೈತನ್ಯ ನನಗೆ ಇದೆ. ಇನ್ನು ಮುಂದಕ್ಕೆ ಯಾರಿಗೂ ಯಾವ

ವಿಚಾರದಲ್ಲೂ ಒಂದು ಸೆಕೆಂಡೂ ಕೂಡ ಅವಕಾಶ ಕೊಡುವುದಿಲ್ಲ. ಸ್ಟ್ರಿಕ್ಟ್ ಆಗಿ ಅಜೆಂಡಾ ಪ್ರಕಾರವೇ ಹೋಗುತ್ತೇನೆ. ಅದಕ್ಕೆ ನಾನೂ ಕೂಡ ತಯಾರಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಈಶ್ವರಪ್ಪನವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಮಧ್ಯೆ ಬೇರೆ ಬೇರೆ ವಿಚಾರಗಳು ಚರ್ಚೆಗೆ ಬರತಕ್ಕಂಥದ್ದು ಪಾರ್ಲಿಮೆಂಟ್‌ನಲ್ಲೂ ಇದೆ, ಶಾಸನ ಸಭೆಗಳಲ್ಲೂ ಕೂಡ ಇದೆ. ಇದನ್ನೇ ಒಂದು ರೀತಿ ಕಡಿವಾಣದಲ್ಲಿ ಹೋಗತಕ್ಕಂಥದ್ದು ಎಲ್ಲೂ ಇಲ್ಲ. ನಿನ್ನೆ ಅನೇಕ ಚರ್ಚೆ ಬಂದಾಗ ಒಬ್ಬರಿಗೊಬ್ಬರು ಚರ್ಚೆಗಳು ನಡೆಸಿದ್ದು ನಿಜ, ಅದರ ಬಗ್ಗೆ ನಾವು ವಿಶ್ಲೇಷಣೆ ಮಾಡಿ ಇವತ್ತು ಅದನ್ನು ಚರ್ಚೆಗೆ ತೆಗೆದುಕೊಳ್ಳತಕ್ಕದ್ದು ಸರಿಯಲ್ಲ. ತಾವು ತಮ್ಮ ಭಾಷಣವನ್ನು ಮುಂದುವರೆಸಿ, ಮಾನ್ಯ ಈಶ್ವರಪ್ಪನವರು ಭಾಷಣ ಮಾಡದೇ ಕುಳಿತುಕೊಳ್ಳತಕ್ಕಂತಹ ಅವಶ್ಯಕತೆ ಏನಿಲ್ಲ. ನೀವು ಒಂದು ಪಕ್ಷದ ಮುಖಂಡರಾಗಿದ್ದೀರಿ, ನಿಮಗೆ ಮಾತನಾಡಲು ಅವಕಾಶ ಕೊಡಲಾಗಿದೆ, ತಾವು ಅದನ್ನು ಪ್ರಾಮಾಣಿಕವಾಗಿ ಸಮರ್ಥನೆ ಮಾಡಿ ಮಾತನಾಡಿ. ದೇವರ ಬಗ್ಗೆ ಚರ್ಚೆಗೆ ಬಂದಾಗ ವಿರೋದ್ಧಾಭಿಪ್ರಾಯಗಳು ಇದ್ದದ್ದೇ. ಆದ್ದರಿಂದ ತಾವು ಇದನ್ನು ದೊಡ್ಡದು ಮಾಡದೇ ತಾವು ತಮ್ಮ ಭಾಷಣವನ್ನು ಮುಂದುವರೆಸಬೇಕೆಂದು ನಾನು ಮಾನ್ಯ ಈಶ್ವರಪ್ಪನವರಲ್ಲಿ ಕಳಕಳಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಜಿ.ಟಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ನಿನ್ನೆ ಚರ್ಚೆಯನ್ನು ಪ್ರಾರಂಭ ಮಾಡಿದವರೇ ಮಾನ್ಯ ಈಶ್ವರಪ್ಪನವರು.

ಅಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೆ.ಎಸ್. ಈಶ್ವರಪ್ಪ : ಸ್ವಾಮಿ, ಮಾನ್ಯ ವಾಟಾಳ್ ನಾಗರಾಜ್‌ರವರೇ, ನಿಮ್ಮ ಬಗ್ಗೆ ನನಗೆ ಗೌರವ ಇದೆ. ಮಾನ್ಯ ಅಧ್ಯಕ್ಷರೇ, ನಾನು ನಿನ್ನೇ ಇಡೀ ರಾತ್ರಿ ನಿದ್ದೆ ಮಾಡಲಿಲ್ಲ. ನಿನ್ನೆ ನಾನು ಇಲ್ಲಿ ತಯಾರಾಗಿ ಬಂದು ಬೆಳಿಗ್ಗೆ ಭಾಷಣ ಶುರು ಮಾಡಿದಾಗಿನಿಂದಲೂ ನನ್ನ ಭಾಷಣಕ್ಕೆ ಅಡಚಣೆ ಉಂಟಾಗುತ್ತಿದ್ದುದನ್ನು ತಾವು ನೋಡಿದ್ದೀರಿ. ನಾನು ಕೆಲವು ವಿಚಾರ ಪ್ರಸ್ತಾಪ ಮಾಡಿದಾಗ ಅದಕ್ಕೆ ಆ ಕಡೆಯಿಂದ ತಕ್ಷಣ ಉತ್ತರ ಬರುತ್ತಿತ್ತು.

(ಗೊಂದಲ)

ಅಧ್ಯಕ್ಷರು : ಲಕ್ಷ್ಮಯ್ಯನವರೇ, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಈಶ್ವರಪ್ಪನವರೇ ನೀವು ಮಾತನಾಡುವುದನ್ನು ಮುಂದುವರೆಸಿ.

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ನನ್ನ ಭಾಷಣವನ್ನು ಮುಗಿಸಿದೆ ಸಾರ್.

ಅಧ್ಯಕ್ಷರು : ಹೌದೇ, ಹಾಗಾದರೆ ಮಾನ್ಯ ಶ್ರೀರಾಮರೆಡ್ಡಿಯವರು ಈಗ ಭಾಷಣ ಮಾಡಿ.

+ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಸನ್ಮಾನ್ಯ ಸಭಾಧ್ಯಕ್ಷರೇ, ಕಳೆದ ಸೋಮವಾರದಿಂದ ಈ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಮಂಡಿಸಿ ಚರ್ಚೆ ಮಾಡುತ್ತಿದ್ದಾರೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅವಿಶ್ವಾಸ ನಿರ್ಣಯ ಮಂಡಿಸತಕ್ಕಂತಹ ಹಕ್ಕು .....

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ತಾವು ಇದೊಂದು ವಿಶೇಷವಾದಂತಹ ಸಂದರ್ಭವಾಗಿದೆ, ಪ್ಲಾನಿಂಗ್ ಕಮಿಷನ್ ಮೀಟಿಂಗ್‌ಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಹೋಗಬೇಕೆಂದು ಹೇಳಿ ಅವರಿಗೆ ಸದನದಲ್ಲಿ ಗೈರು ಹಾಜರಾಗಲು ಅವಕಾಶ ಕೊಟ್ಟಿರಿ. ನಾನು ತಮಗೆ ಹೇಳಿದ ಹಾಗೆ ಅಕ್ಟೋಬರ್ ಮೊದಲನೇ ಅವರು ಮೀಟಿಂಗ್‌ಗೆ ಅವಕಾಶ ಮಾಡಿಕೊಟ್ಟಿದ್ದರು. ಆಗ ಯಾವುದೋ ಕಾರಣಕ್ಕೆ ಮಾನ್ಯ ಮುಖ್ಯಮಂತ್ರಿಗಳು ಹೋಗಲಿಲ್ಲ. ಅವಿಶ್ವಾಸ ನಿರ್ಣಯದ ಬಗ್ಗೆ ಮಹತ್ವವಾದ ಚರ್ಚೆಯಾಗುತ್ತಿರುವಂತಹ ಈ ಸಂದರ್ಭದಲ್ಲಿ ಅನಿವಾರ್ಯವಾದಂತಹ ಪ್ರಸಂಗ ಬಹಳ ಇಂಪಾರ್ಟೆಂಟ್ ಎಂದು ಹೇಳಿ ತಾವು ಅವರು ಹೋಗಲು ಅನುಮತಿಯನ್ನು ಕೊಟ್ಟಿರಿ. ಪ್ಲಾನಿಂಗ್ ಕಮಿಷನ್ ಮೀಟಿಂಗ್ ಆಗಲೇ ಮುಗಿದಿದೆ. ಆದರೂ ಸಹ ಇವತ್ತು ಸದನದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳೂ ಇಲ್ಲ, ಮಾನ್ಯ ಮುಖ್ಯಮಂತ್ರಿಗಳೂ ಸಹಾ ಇಲ್ಲ. ನಾನು ಈ ನಡವಳಿಕೆಯನ್ನು ಪ್ರತಿಭಟಿಸುತ್ತೇನೆ. ನಾನು ಇಷ್ಟೇ ಹೇಳುತ್ತೇನೆ, ಈ ರೀತಿ ಹೇಗೆ ಬೇಕಾದರೂ ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆಯಾಗಲಿ, ನಾನು ಹೊರಗಡೆ ರಾಜಕಾರಣ ಮಾಡಿಕೊಂಡು, ನನ್ನ ವ್ಯವಹಾರ ಮುಗಿಸಿಕೊಂಡು ನಾನು ಇಲ್ಲಿಗೆ ಬರುತ್ತೇನೆ ಎಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಹೇಳುವುದಾದರೆ, ಈ ನಡವಳಿಕೆಯನ್ನು ನಾನು ಪ್ರತಿಭಟನೆ ಮಾಡುತ್ತೇನೆ. ಈ ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆಗೆ ಇವರು ಮಹತ್ವ ಕೊಡುವುದಿಲ್ಲ ಎನ್ನುವುದಕ್ಕೇ ಇವರಿಗೆ ಇವತ್ತು ಅಧಿಕಾರದಲ್ಲಿ ಮುಂದುವರೆಯುವ ಅಧಿಕಾರ ಇಲ್ಲ. ನಮ್ಮ ಬಿ.ಜೆ.ಪಿ. ಶಾಸಕರು ಇಲ್ಲೇ ಕುಳಿತಿರುತ್ತಾರೆ, ಅವರೆಲ್ಲರ ಪರವಾಗಿ ನಡವಳಿಕೆಯನ್ನು ಪ್ರತಿಭಟನೆ ಮಾಡಿ ನಾನು ವಾಕೌಟ್ ಮಾಡುತ್ತೇನೆ. ನೀವು ಅವರನ್ನು ಕರೆಯಬೇಕು, ನೀವು ಅವರನ್ನು ಛೀಮಾರಿ ಹಾಕುತ್ತೀರೋ ಏನು ಮಾಡುತ್ತೀರೋ ನನಗೆ ಗೊತ್ತಿಲ್ಲ. ಆದರೆ ಡ್ಯೂಟಿ .....

ಅಧ್ಯಕ್ಷರು : ಒಂದು ನಿಮಿಷ ಇದ್ದು ವಾಕೌಟ್ ಮಾಡಿ, ನಾನು ಏನೋ ಹೇಳುವುದಿದೆ. ಪ್ಲಾನಿಂಗ್ ಕಮೀಷನ್‌ರವರು ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ನಿನ್ನೆ ಮಧ್ಯಾಹ್ನ 3 ಗಂಟೆಗೆ ಟೈಮ್ ಕೊಟ್ಟಿದ್ದರು. ನಿನ್ನೆ ಮಧ್ಯಹ್ನ 3 ಗಂಟೆಗೆ ಮೀಟಿಂಗ್‌ಗೆ ಹೋದರು. ಮಾನ್ಯ ಮುಖ್ಯಮಂತ್ರಿಗಳು ಮತ್ತೆ ಅನಾರೋಗ್ಯದಿಂದ ನರಳುತ್ತಿದ್ದಾರೆ, ಅವರಿಗೆ ವಿಪರೀತ ಜ್ವರ ಇದೆ, ಅವರು ಮೀಟಿಂಗ್‌ಗೂ ಕೂಡ ಹೋಗುವುದಕ್ಕೆ ಆಗಲಿಲ್ಲ, ಮಾನ್ಯ ಉಪ ಮುಖ್ಯಮಂತ್ರಿಗಳು ಮಾತ್ರ ಮೀಟಿಂಗ್‌ನಲ್ಲಿ ಹಾಜರಾಗಿದ್ದಾರೆ. ನಾನು ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡಿದೆ. ಇವತ್ತು ಸ್ವಲ್ಪ ಜ್ವರ ಬಿಟ್ಟ ಹಾಗಿದೆ, ಡಾಕ್ಟರ್ ಪರ್ಮಿಷನ್ ಕೊಟ್ಟ ತಕ್ಷಣ ಇವತ್ತು ರಾತ್ರಿ ಬಂದು ಬಿಡುತ್ತೇನೆ ಎಂದು ನನಗೆ ಹೇಳಿದರು. ಮಾನ್ಯ ಉಪ ಮುಖ್ಯಮಂತ್ರಿಗಳು ಈಗಾಗಲೇ ದೆಹಲಿ ಬಿಟ್ಟಿದ್ದಾರೆ. ಈಗ ಪ್ರಯಾಣ ಮಾಡುತ್ತಿದ್ದಾರೆ....

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಪ್ಲಾನಿಂಗ್ ಕಮಿಷನ್ ಮೀಟಿಂಗ್‌ನಲ್ಲಿ ಭಾಗವಹಿಸಿದ್ದರ ಬಗ್ಗೆ ಪೇಪರ್‌ಗಳಲ್ಲಿ ಫೋಟೋ ಬಂದಿದೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳಿಗೆ ಫಸ್ಟ್ ರೌಂಡ್‌ಗೆ ಹೋಗಲಿಕ್ಕೆ ಆಗಲಿಲ್ಲ. ಅವರು ಜ್ವರದಿಂದ ಬಳಲುತ್ತಿದ್ದರು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಅಕ್ಟೋಬರ್ 8 ಮತ್ತು 9 ರಂದು ಪ್ಲಾನಿಂಗ್ ಕಮಿಷನ್‌ರವರು ಸಮಯ ಕೊಟ್ಟರು. ಇವರ ಒಳಜಗಳ ಅಥವಾ ಬೇರೆ ಕಾರಣಕ್ಕೋಸ್ಕರ ಅವತ್ತು ಹೋಗಲಿಲ್ಲ. ಅವಿಶ್ವಾಸ ನಿರ್ಣಯ ಮಂಡನೆ ಮಾಡಿರುವುದರಿಂದ, ಇವರು ಪ್ಲಾನಿಂಗ್ ಕಮಿಷನ್ ಅನ್ನು ರಿಕ್ವೆಸ್ಟ್ ಮಾಡಿಕೊಳ್ಳಬೇಕಾಗಿತ್ತು, ಇಲ್ಲಿ ಮಹತ್ವವಾದಂತಹ ಚರ್ಚೆಯಾಗುತ್ತಿದೆ, ನನ್ನ ಸಂಪುಟದ ಮೇಲಿನ ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆಯಾಗುತ್ತಿದೆ, ಬೇರೆ ದಿನಾಂಕ ಕೊಡಿ ಎಂದು ಇವರು ಕೇಳಬೇಕಾಗಿತ್ತು. ಇದು ಎರಡನೆಯ ಬಾರಿ. ಮೂರನೆಯದು, ನಿನ್ನೆ ಪ್ಲಾನಿಂಗ್ ಕಮಿಷನ್ ಮೀಟಿಂಗ್‌ಗೆ ಹೋಗಿದ್ದಾರೆ.

ಶ್ರೀ ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪ ಮುಖ್ಯಮಂತ್ರಿಗಳು ಇನ್ನೇನು ಈಗ ಸದನಕ್ಕೆ ಬರುವವರಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಹಾಗದರೆ ಅವರು ಬರುವವರೆಗೆ ಸದನವನ್ನು ಮುಂದೂಡಿ. ಇವರ ಅನುಕೂಲಕ್ಕೆ ತಕ್ಕಂತೆ ಸದನ ನಡೆಯುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ, ಮಾನ್ಯ ಮುಖ್ಯಮಂತ್ರಿಗಳ ಮತ್ತು ಉಪ ಮುಖ್ಯಮಂತ್ರಿಗಳ ಎಲ್ಲಾ ಕಾರ್ಯಕ್ರಮಗಳ ಜವಾಬ್ದಾರಿ ನನ್ನದಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು : ಈ ಸದನದ ಕಲಾಪಕ್ಕೆ ಸೀಮಿತವಾಗಿ ನಾವು ಮಾಡಿಕೊಂಡಿರತಕ್ಕಂತಹ ಒಪ್ಪಂದಕ್ಕೆ ಅನುಗುಣವಾಗಿ ನಿನ್ನೆ ಪ್ಲಾನಿಂಗ್ ಕಮಿಷನ್ ಮೀಟಿಂಗ್‌ಗೆ ಅವರು ಹೋಗಿದ್ದರು. ನಿನ್ನೆ 3 ಗಂಟೆಗೆ ಮೀಟಿಂಗ್ ಇತ್ತು. ಮಾನ್ಯ ಉಪ ಮುಖ್ಯಮಂತ್ರಿಗಳು ಬೆಂಗಳೂರಿಗೆ ಬಂದಿದ್ದಾರೆ. ಅವರು ಸದನಕ್ಕೆ ಬರುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಜೊತೆ ನಾನು ಮಾತನಾಡಿದೆ. ನಿನ್ನೆ ಕೂಡ ಅವರ ಆರೋಗ್ಯ ಸರಿ ಇರಲಿಲ್ಲ. ಇವತ್ತು ಡಾಕ್ಟರ್ ನನಗೆ ಪರ್ಮಿಷನ್ ಕೊಟ್ಟರೆ ನಾನು ಇವತ್ತೇ ರಾತ್ರಿ ಟ್ರಾವಲ್ ಮಾಡಿ ಬರುತ್ತೇನೆಂದು ಅವರು ನನಗೆ ಹೇಳಿದ್ದಾರೆ. ನಾನು ಅವರಿಗೆ ನಾನು ಬಹಳ ದಿವಸ ತಾಳುವುದಕ್ಕೆ ಆಗುವುದಿಲ್ಲ, ದಯಮಾಡಿ ಬೇಗ ಬರಬೇಕು ಎಂದು ಹೇಳಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಸತ್ಯಕ್ಕೆ ದೂರವಾದಂತಹ ಮಾತುಗಳನ್ನು ಅವರು ನಿಮಗೆ ಹೇಳಿದ್ದಾರೆ. ಅವರು ಅಲ್ಲಿ ರಾಜಕೀಯದಲ್ಲಿ ಮುಳುಗಿದ್ದಾರೆ. ಪ್ರಧಾನಿ, ಮಾಜಿ ಪ್ರಧಾನಿ, ಮತ್ತೊಬ್ಬರನ್ನು ಭೇಟಿ ಮಾಡಿ ಕೊಡುವ ಮತ್ತು ತೆಗೆದುಕೊಳ್ಳುವ ವ್ಯವಹಾರದಲ್ಲಿ ಅವರು ತೊಡಗಿದ್ದಾರೆ. ಅವರು ಇಲ್ಲಿಗೆ ಬರಲೇಬೇಕು. ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲಿ ಇರದೇ ಇರಲು ಕಾರಣವೇನು? ಈ ನಡವಳಿಕೆಯನ್ನು ಪ್ರತಿಭಟನೆ ಮಾಡಿ ನಾನು ವಾಕೌಟ್ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಯಡಿಯೂರಪ್ಪನವರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು : ನನಗೆ ಗೊತ್ತಿದ್ದ ವಿಚಾರ ನಾನು ತಿಳಿಸಿದ್ದೇನೆ. ಮಾನ್ಯ ಶ್ರೀರಾಮರೆಡ್ಡಿಯವರೇ, ತಾವು ತಮ್ಮ ಭಾಷಣವನ್ನು ಮುಂದುವರೆಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಸನ್ಮಾನ್ಯ ಅಧ್ಯಕ್ಷರೇ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಮಂಡಿಸತಕ್ಕಂತಹ ಹಕ್ಕು ವಿರೋಧ ಪಕ್ಷಗಳಿಗೆ ಇದೆ. ಇವತ್ತು ಕಾಂಗ್ರೆಸ್ ಪಕ್ಷ ಮತ್ತು ಭಾರತೀಯ ಜನತಾ ಪಕ್ಷ ಎರಡೂ ಈ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿವೆ. ಅವಿಶ್ವಾಸ ನಿರ್ಣಯ ಮಂಡಿಸತಕ್ಕಂಥದ್ದು ವಿರೋಧ ಪಕ್ಷಗಳ ಕೈಯಲ್ಲಿರತಕ್ಕಂತಹ ಒಂದು ರಾಜಕೀಯ ಅಸ್ತ್ರ. ಹಾಗಾಗಿ ಇವತ್ತು ರಾಜಕೀಯ ವಿಷಯ ಪ್ರಸ್ತಾಪ ಆಗಬೇಕಾಗಿದೆ. ರಾಜಕೀಯವಾಗಿ ಹೇಗೆ ಈ ಸರ್ಕಾರವನ್ನು ಅವಿಶ್ವಾಸ ನಿರ್ಣಯದ ಮುಖಾಂತರ ತೆಗೆಯಬೇಕೆಂದು ಹೇಳುತ್ತಿದ್ದಾರೆ, ಅದಕ್ಕೆ ವಿರೋಧ ಪಕ್ಷಗಳು ರಾಜಕೀಯವಾಗಿ ಉತ್ತರ ಕೊಡಬೇಕಾಗುತ್ತದೆ. ರಾಜಕೀಯವಾಗಿ ಯಾವ ರೀತಿಯಾಗಿ ಈ ಸರ್ಕಾರ ಹೋಗಬೇಕಾಗುತ್ತದೆ, ಅದನ್ನೂ ಕೂಡ ವಿರೋಧ ಪಕ್ಷಗಳು ಹೇಳಬೇಕು. ಮಾನ್ಯ ವಿರೋಧ ಪಕ್ಷಗಳು ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಸೇರಿ ಮಂಡಿಸಿರತಕ್ಕಂತಹ ಅವಿಶ್ವಾಸ ನಿರ್ಣಯ ಏನಿದೆ, ಅವರೂ ಇವತ್ತು ಈ ಸದನಕ್ಕೆ ಮತ್ತು ರಾಜ್ಯಕ್ಕೆ ಸ್ಪಷ್ಟ ಪಡಿಸಬೇಕಾಗುತ್ತದೆ. ಈ ಸರ್ಕಾರವನ್ನು ಅವಿಶ್ವಾಸ ನಿರ್ಣಯದ ಮುಖಾಂತರ ತೆಗೆದರೆ ಇವರಿಬ್ಬರೂ ಸೇರಿ ಸರ್ಕಾರ ರಚಿಸುವುದಕ್ಕೆ ಸಿದ್ಧರಿದ್ದಾರೆ ಎನ್ನತಕ್ಕಂತಹ ಅಂಶವನ್ನು ಆ ಎರಡೂ ಪಕ್ಷಗಳು ಈ ಸದನಕ್ಕೆ ಮತ್ತು ರಾಜ್ಯಕ್ಕೆ ಸ್ಪಷ್ಟಪಡಿಸಬೇಕಾಗುತ್ತದೆ. ಹಾಗಾಗಿ ಈ ರಾಜಕೀಯ ಪ್ರಶ್ನೆ ಏನಿದೆ, ಅವಿಶ್ವಾಸ ನಿರ್ಣಯದಲ್ಲಿ ರಾಜಕೀಯ ಪ್ರಶ್ನೆಗೆ ನೇರವಾಗಿ ಉತ್ತರ ಕೊಡಬೇಕಾದವರು ಅವರು ಮತ್ತು ಅದಕ್ಕೆ ರಾಜಕೀಯವಾಗಿ ಸರ್ಕಾರವನ್ನು ಯಾವ ರೀತಿಯಿಂದ ತೆಗೆಯುತ್ತಾರೆ ಅದನ್ನು ಸಮರ್ಥನೆ ಹೇಗೆ ಮಾಡಿಕೊಳ್ಳುತ್ತಾರೆಂದು ಸರ್ಕಾರ ಹೇಳಬೇಕು. ಇನ್ನು ಎರಡನೆಯದು ಬಹಳ ಪ್ರಮುಖವಾದ ಅಂಶ, ಇವತ್ತು ಈ ಸರ್ಕಾರ ಹೋಗಲಿಕ್ಕೆ ಇರತಕ್ಕಂತಹ ರಾಜಕೀಯ ಕಾರಣಗಳೇನು? ಆಳುವ ಪಕ್ಷ ಕೂಡ ಇವತ್ತು ಉತ್ತರ ಹೇಳಬೇಕಾಗುತ್ತದೆ. ಅವಿಶ್ವಾಸ ನಿರ್ಣಯ ಮಂಡಿಸಿರತಕ್ಕಂತಹ ಉದ್ದೇಶ ರಾಜಕೀಯವಾಗಿ ನನಗೆ ಅರ್ಥವಾಗಿರತಕ್ಕಂಥದ್ದು, ಜನತಾದಳದಲ್ಲಿ ಭಿನ್ನಮತ ಹೆಚ್ಚಿಗೆ ಇದೆ. ಶ್ರೀಮಾನ್ ಜೆ.ಹೆಚ್. ಪಟೇಲ್‌ರ ನಾಯಕತ್ವದಲ್ಲಿ ಜನತಾದಳದ ಒಂದು ಭಾಗದ ಜನ ತಮ್ಮ ಅವಿಶ್ವಾಸ ವ್ಯಕ್ತಪಡಿಸಿ ನಾಯಕತ್ವ ಬದಲಾವಣೆಗೆ ಒತ್ತಾಯ ಮಾಡುತ್ತಿದ್ದಾರೆ, ಅನ್ನುವ ಕಾರಣಕ್ಕೋಸ್ಕರ ಅವರ ಸಂಖ್ಯೆ ಎಷ್ಟು ಇದೆ ಎಂಬುದು ನನಗೆ ಗೊತ್ತಿಲ್ಲ. ಪತ್ರಿಕೆಯಲ್ಲಿ ಬಂದ ಸಂಖ್ಯೆಗಳು, ಒಳಗಡೆ ಸಂಖ್ಯೆ ಏನಿದೆ ನನಗೆ ಗೊತ್ತಿಲ್ಲ. ಆ ಸಂಖ್ಯೆಗಳ ಆಧಾರದ ಮೇಲೆ ಈ ಸರ್ಕಾರವನ್ನು ರಾಜಕೀಯವಾಗಿ ತೆಗೆಯಬೇಕು ಅನ್ನತಕ್ಕಂತಹ ಉದ್ದೇಶದಿಂದ ಇವತ್ತು ಅವಿಶ್ವಾಸ ನಿರ್ಣಯ ಮಂಡಿಸಿರಬಹುದು ಎಂದು ನಾನು ಭಾವಿಸುತ್ತೇನೆ. ಹಾಗಾದರೆ, ಜನತಾದಳದಲ್ಲಿ ಆ ಪರಿಸ್ಥಿತಿ ಇದೆ ಅನ್ನತಕ್ಕಂಥದ್ದೂ ಕೂಡ ಕರ್ನಾಟಕ ರಾಜ್ಯದ ಜನತೆಗೆ ಸ್ಪಷ್ಟವಾಗಿ ಗೊತ್ತಿದೆ. ಆದರೆ ಜನತಾದಳ ಸರ್ಕಾರಕ್ಕೆ ಮತ್ತು ಆ ಪಕ್ಷಕ್ಕೆ ರಾಜಕೀಯ ಜವಾಬ್ದಾರಿ ಏನಾದರೂ ಇದ್ದಿದ್ದರೆ ಬಹುಶಃ ಈ ಸ್ಥಿತಿಗೆ ಈ ರಾಜ್ಯವನ್ನು ತೆಗೆದುಕೊಂಡು ಬರುತ್ತಿರಲಿಲ್ಲ. ಜನತಾದಳಕ್ಕೆ ಮತ್ತು ಜನತಾದಳ ಸರ್ಕಾರಕ್ಕೆ ಕರ್ನಾಟಕ ರಾಜ್ಯದ ಜನತೆಗೆ 1994ನೇ ಇಸವಿಯಲ್ಲಿ ಜನತೆ ಕೊಟ್ಟಂತಹ ಆದೇಶವನ್ನು ಧಿಕ್ಕರಿಸತಕ್ಕಂತಹ ಆ ಆದೇಶಕ್ಕೆ ವಿರುದ್ಧವಾಗಿ ಹೋಗತಕ್ಕಂತಹ ಹಕ್ಕು ಜನತಾದಳ ಮತ್ತು ಆ ಸರ್ಕಾರಕ್ಕೆ ಇಲ್ಲ. ಪಾರ್ಲಿಮೆಂಟರಿ ವ್ಯವಸ್ಥೆಯಲ್ಲಿ ಜನತೆಯ ಆದೇಶ ಸರ್ವ ಪರಮ ಅಧಿಕಾರ ಇರತಕ್ಕಂಥದ್ದು. ಆದರೆ ಇವತ್ತು ಜನತಾದಳದವರಿಗೆ ಏನಾಗಿದೆ ಎಂದರೆ, ನಮ್ಮ ಕರ್ನಾಟಕ ರಾಜ್ಯದ

7444 — 140

ಜನತೆ ಯಾವ ಆಧಾರದ ಮೇಲೆ ಅಧಿಕಾರವನ್ನು ಕೊಟ್ಟಿದ್ದಾರೆ ಅನ್ನತಕ್ಕಂತಹ ಅಂಶವನ್ನು ಸಂಪೂರ್ಣವಾಗಿ ಮರೆತು ಬೇಜವಾಬ್ದಾರಿ ರಾಜಕಾರಣವನ್ನು ಬೇಜವಾಬ್ದಾರಿತನವನ್ನು ಜನತಾದಳ ಸರ್ಕಾರ ಇವತ್ತು ಪ್ರದರ್ಶನ ಮಾಡುತ್ತಿದೆ. ಕರ್ನಾಟಕ ರಾಜ್ಯದ ಜನತೆ ಇವರ ಮೇಲೆ ಬಹಳ ಪ್ರೀತಿ ಇದ್ದು ಮತ ಕೊಡಲಿಲ್ಲ. 1983 ರಿಂದ 1989ರವರೆಗೆ ಕರ್ನಾಟಕ ರಾಜ್ಯದ ಜನತೆ ಇವರನ್ನು ನೋಡಿದ್ದರು. ಇವರ ಮೇಲೆ ಭಾರೀ ಪ್ರೀತಿ ಇದ್ದು ಕರ್ನಾಟಕ ರಾಜ್ಯವನ್ನು ರಾಮ ರಾಜ್ಯ ಮಾಡುತ್ತಾರೆ ಅನ್ನುವ ದೃಷ್ಟಿಯಿಂದ ಖಂಡಿತ ಮತ ಕೊಡಲಿಲ್ಲ. ಆದರೆ ಇವರಿಗೆ ಮತ ಕೊಟ್ಟಿದ್ದು ಏಕೆಂದರೆ, ಯಾರು ಇವತ್ತು ಕಾಂಗ್ರೆಸ್ ಮತ್ತು ಬಿಜೆಪಿ ಈ ಎರಡೂ ರಾಜ್ಯಗಳು ಅವಿಶ್ವಾಸ ನಿರ್ಣಯವನ್ನು ಮಂಡಿಸಿದ್ದಾರೆ, ಈ ಎರಡು ರಾಜಕೀಯ ಪಕ್ಷಗಳೂ ಅಧಿಕಾರಕ್ಕೆ ಬರಬಾರದು, ಇವರಿಗೆ ಮತ ಕೊಡಬಾರದು, ಇವರಿಬ್ಬರೂ ಅಧಿಕಾರಕ್ಕೆ ಬಂದರೆ ಈ ರಾಜ್ಯದ ಭವಿಷ್ಯಕ್ಕೆ ಕೆಡುಕಾಗುತ್ತದೆ ಅನ್ನತಕ್ಕಂತಹ ದೃಷ್ಟಿಯಲ್ಲಿ ಅನಿವಾರ್ಯವಾದ ಪರಿಸ್ಥಿತಿಯಲ್ಲಿ ನಿಮಗೆ ಮತ ಕೊಟ್ಟರೇ ಹೊರತು ಇವರ ಮೇಲೆ ಪ್ರೀತಿ ಇದ್ದು ಇವರು ಏನಾದರೂ ಉದ್ಧಾರ ಮಾಡುತ್ತಾರೆ ಅನ್ನತಕ್ಕಂತಹ ಲೆಕ್ಕದಲ್ಲಿ ಮತ ಕೊಡಲಿಲ್ಲ. ಇದು ಕರ್ನಾಟಕ ರಾಜ್ಯದ ಜನತೆಯ ಆದೇಶ. ಆದರೆ ಆ ಆದೇಶವನ್ನೇ ಇವತ್ತು ಇವರು ಧಿಕ್ಕರಿಸಿದ್ದಾರೆ. ಆ ಆದೇಶವನ್ನು ಗಮನದಲ್ಲಿಟ್ಟುಕೊಳ್ಳದೆ, ನಮಗೆ ಏಕೆ ಮತ ಕೊಟ್ಟರು ಎಂದು ಗಮನದಲ್ಲಿಡದೆ ಕನಿಷ್ಟವಾಗಿ ಕೂಡ ಪರಿಗಣಿಸದೆ ಇವರು ನಮಗೆ ಏನೋ ಶಕ್ತಿ ಇದೆ, ನಮ್ಮ ಶಕ್ತಿ ಮತ್ತು ನಮ್ಮ ಕೆಲಸದ ಆಧಾರದ ಮೇಲೆ ನಮಗೆ ಮತ ಸಿಕ್ಕಿದೆ ಎನ್ನುವ ಲೆಕ್ಕದಲ್ಲಿ, ಕರ್ನಾಟಕ ರಾಜ್ಯವನ್ನು ನಾವು ಹೇಗೆ ಬೇಕಾದರೂ ನಡೆಸಿಕೊಂಡು ಹೋಗಬಹುದು ಎನ್ನುವ ರೀತಿಯಲ್ಲಿ ಇವತ್ತು ಅಧಿಕಾರ ನಡೆಸುತ್ತಿದ್ದಾರೆ. ಇವರ ಬೀದಿ ರಂಪ ವರ್ಷಕ್ಕೆ ಒಂದು ಸಾರಿ ಪ್ರಾರಂಭವಾಗುತ್ತದೆ. ಪ್ರತಿ ವರ್ಷ ನಮ್ಮಲ್ಲಿ ಸತ್ತ ನಂತರ ಶ್ರಾದ್ಧ ಮಾಡುವ ರೀತಿಯಲ್ಲಿ ಶ್ರಾದ್ಧ ಪ್ರಾರಂಭವಾಗುತ್ತದೆ. ಅದು ಇವರಿಗೆ ಶ್ರಾದ್ಧ ಆದರೆ ತೊಂದರೆ ಇಲ್ಲ. ಕರ್ನಾಟಕ ರಾಜ್ಯದ ಜನತೆಗೆ ಯಾವ ರೀತಿ ಶ್ರಾದ್ಧ ಆಗುತ್ತದೆ ಎಂದು ಅದು ಬಹಳ ಮುಖ್ಯ. ಹಾಗಾಗಿ ಇವರು ಇವತ್ತು ಕರ್ನಾಟಕ ರಾಜ್ಯದ ಜನತೆಗೆ ತಮ್ಮ ಅಂತರ ಜಗಳದಿಂದ ಏನೆಲ್ಲಾ ಪರಿಣಾಮವಾಗಿದೆ ಎನ್ನತಕ್ಕಂಥದ್ದನ್ನು ಕನಿಷ್ಟ ಆಲೋಚನೆ ಮಾಡತಕ್ಕಂತಹ ಪರಿಜ್ಞಾನ ಇದ್ದಿದ್ದರೆ ಇವರೇ ಸ್ವತಃ ರಾಜೀನಾಮೆ ಕೊಡಬೇಕಾಗಿತ್ತು. ಯಾರೂ ಅವಿಶ್ವಾಸ ನಿರ್ಣಯ ಮಂಡಿಸತಕ್ಕಂತಹ ಅವಶ್ಯಕತೆ ಇರಲಿಲ್ಲ. ಇವತ್ತು ಆಡಳಿತ ಯಂತ್ರ ಸಂಪೂರ್ಣವಾಗಿ ಕುಸಿದಿದೆ. ನಿಮ್ಮ ಅಧಿಕಾರಿಗಳಿಗೆ ಇದು ಖುಷಿ. ಯಾವುದೇ ಸರ್ಕಾರದಲ್ಲಿ ಒಳ ಜಗಳ ಪ್ರಾರಂಭವಾದರೆ ಅಧಿಕಾರಿಗಳು ಇವತ್ತು ಸಂಪೂರ್ಣವಾಗಿ ಸರ್ವಾಧಿಕಾರಿಗಳ ರೀತಿಯಲ್ಲಿ ವರ್ತನೆ ಮಾಡುತ್ತಾರೆ ನಮ್ಮ ಶಾಸಕರಿಗೆ ಕೇಳಿದರೆ ಗೊತ್ತಾಗುತ್ತದೆ. ಶಾಸಕರು ಫೋನ್ ಮಾಡಿದರೆ ಬಾತ್ ರೂಮ್‌ನಲ್ಲಿದ್ದಾರೆ, ಮೀಟಿಂಗ್‌ನಲ್ಲಿದ್ದಾರೆ, ಅಸೆಂಬ್ಲಿಗೆ ಹೋಗಿದ್ದಾರೆ, ಮತ್ತು ಆಫೀಸ್‌ಗೆ ಹೋಗಿದ್ದಾರೆ ಎಂದು ಉತ್ತರ ಬರುತ್ತದೆ. This indicates how this Government is functioning, how internal quarrel of the Janata Dal has affected the administration today in this State. ಇದಕ್ಕೆ ಯಾರು ಜವಾಬ್ದಾರರು? ಇವರೇ ಜವಾಬ್ದಾರರು. ಅಂದರೆ, ಒಂದು ಕಡೆ ತಮ್ಮ ರಾಜಕೀಯ ಜವಾಬ್ದಾರಿಯನ್ನು ಮರೆತು ಕರ್ನಾಟಕ ರಾಜ್ಯದ ಜನತೆ ಇವರಿಗೆ ಏತಕ್ಕೆ ಅಧಿಕಾರ ಕೊಟ್ಟಿದ್ದಾರೆ ಅದನ್ನು ಮರೆತು ಯಾವ ರಾಜಕೀಯ ಪಕ್ಷಗಳನ್ನು ತಿರಸ್ಕಾರ ಮಾಡಿದ್ದರು ಆ ರಾಜಕೀಯ ಪಕ್ಷಗಳಿಗೆ ಮತ್ತೆ ಪುನರ್ಜೀವ ಕೊಡುವ ರೀತಿಯಲ್ಲಿ ಇವತ್ತು ಇವರು ರಾಜಕಾರಣ ಮಾಡುತ್ತಿದ್ದಾರೆ.

ಅದಕ್ಕೆ ಕರ್ನಾಟಕ ರಾಜ್ಯದ ಜನತೆ ಅವರನ್ನು ಖಂಡಿತವಾಗಿ ಕ್ಷಮಿಸುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ ಕರ್ನಾಟಕ ರಾಜ್ಯದಲ್ಲಿ ಜನತೆ ಏನನ್ನು ಅಪೇಕ್ಷೆ ಪಟ್ಟಿದ್ದರು ಆ ಅಪೇಕ್ಷೆಗಳಿಗೆ ಇವರು ಜನತಾದಳ ಸರ್ಕಾರ ಮತ್ತು ಅವಿಶ್ವಾಸ ನಿರ್ಣಯ ಮಂಡಿಸಿರತಕ್ಕಂತಹ ಎರಡೂ ಕೂಡ ಜವಾಬ್ದಾರರಾಗುತ್ತಾರೆ. ಏಕೆಂದರೆ, ಕರ್ನಾಟಕದ ಜನತೆ ಐದು ವರ್ಷಗಳವರಗೆ ಅಧಿಕಾರ ನಡೆಸುವುದಕ್ಕೆ ಇವರಿಗೆ ಅಧಿಕಾರ ಕೊಟ್ಟಿದ್ದಾರೆ. ಅವಿಶ್ವಾಸ ನಿರ್ಣಯ ಮಂಡನೆಯಾಗುತ್ತಿರುವುದು ಇದು ಮೂರನೇ ಸಲ. ಅವಿಶ್ವಾಸ ನಿರ್ಣಯ ಮಂಡನೆ ಒಂದು ಸಾರಿ ಮುಖ್ಯ ಮಂತ್ರಿಗಳು ವಿಶ್ವಾಸ ನಿರ್ಣಯ ಕೇಳಿದ್ದರು, ಆಗ ಚರ್ಚೆ ನಡೆಯಿತು, ಒಂದು ಬಿಜೆಪಿಯವರು ಪ್ರತ್ಯೇಕವಾಗಿ ಅವಿಶ್ವಾಸ ನಿರ್ಣಯ ಮಂಡಿಸಿದ್ದರು. ಈಗ ಇಬ್ಬರೂ ಸೇರಿ ಅವಿಶ್ವಾಸ ನಿರ್ಣಯ ಮಂಡಿಸಿದ್ದಾರೆ. ರಾಜಕೀಯವಾಗಿ ಅವಿಶ್ವಾಸ ನಿರ್ಣಯ ಮಂಡಿಸಿರತಕ್ಕಂತಹ ಇವರೂ ಕೂಡ ಕರ್ನಾಟಕ ರಾಜ್ಯದ ಜನತೆಗೆ ಉತ್ತರ ಹೇಳಬೇಕಾಗುತ್ತದೆ. ಅವರೂ ಕೂಡ ಹೇಳಬೇಕಾಗುತ್ತದೆ. ಆದರೆ ಜನತಾದಳ ಅಧಿಕಾರದಲ್ಲಿರುವುದರಿಂದ ಅವರು ಹೆಚ್ಚಿನ ಜವಾಬ್ದಾರಿಯಿಂದ ಕರ್ನಾಟಕ ರಾಜ್ಯದ ಜನತೆಗೆ ಉತ್ತರ ಕೊಡಬೇಕಾಗುತ್ತದೆ. ಎಲ್ಲಾ ರಂಗಗಳ ಬಗ್ಗೆ ಹೇಗೆ ವಿಫಲತೆ ಸಾಧಿಸಿದ್ದಾರೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಪಟ್ಟಿ ಮಾಡಿ ಹೇಳಿದ್ದಾರೆ. ಆ ಪಟ್ಟಿಯಲ್ಲಿರತಕ್ಕಂತಹ ಎಲ್ಲಾ ಅಂಶಗಳನ್ನು ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಇವತ್ತು ಹಲವಾರು ಆರ್ಥಿಕ ವಿಷಯಗಳಿಗೆ ಸಂಬಂಧಪಟ್ಟ ಹಾಗೆ ಕರ್ನಾಟಕ ರಾಜ್ಯ ಸರ್ಕಾರ ಹೇಗೆ ವಿಫಲಗೊಂಡಿದೆ, ಕರ್ನಾಟಕ ರಾಜ್ಯದ ಅಭಿವೃದ್ಧಿ ಬಗ್ಗೆ ಹೇಗೆ ವಿಫಲವಾಗಿದೆ ಅನ್ನತಕ್ಕಂತಹ ಅಂಶಗಳನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ನಾನು ಕೆಲವು ಅಂಶಗಳನ್ನು ಅಷ್ಟೇ ಇದರಲ್ಲಿ ಇರತಕ್ಕಂತಹ ಅಂಶಗಳನ್ನು ಮಾತ್ರ ಕೇಳುವುದಕ್ಕೆ ಇಷ್ಟಪಡುತ್ತೇನೆ. ಅದರಲ್ಲಿ ಪ್ರಮುಖವಾಗಿ ಪ್ರಸ್ತಾಪ ಮಾಡಿದ್ದು ಬೆಲೆ ಏರಿಕೆ ಪ್ರಶ್ನೆ. ಬೆಲೆ ಏರಿಕೆ ಪ್ರಶ್ನೆ ಪ್ರಸ್ತಾಪ ಮಾಡಿದ ಸಂದರ್ಭದಲ್ಲಿ ಬೆಲೆ ಏರಿಕೆಯನ್ನು ತಡೆಗಟ್ಟುವುದರಲ್ಲಿ ಕರ್ನಾಟಕ ರಾಜ್ಯ ಸರ್ಕಾರ ವಿಫಲವಾಗಿದೆ. ಇದು ಒಂದು ವಾದವನ್ನು ಮಂಡಿಸಿದ್ದಾರೆ. ನನಗೆ ಅದರ ಬಗ್ಗೆ ತೀವ್ರವಾದ ಭಿನ್ನಾಭಿಪ್ರಾಯವಿದೆ. ಕರ್ನಾಟಕ ರಾಜ್ಯದಲ್ಲಾಗಲಿ, ಅಥವಾ ಯಾವುದೇ ಒಂದು ರಾಜ್ಯದಲ್ಲಿ ಬೆಲೆ ಏರಿಕೆಯ ಪ್ರವೃತ್ತಿಯನ್ನು ತಡೆಗಟ್ಟತಕ್ಕಂತಹ ಬಹಳ ಪ್ರಮುಖವಾದ ಜವಾಬ್ದಾರಿ ಇರತಕ್ಕಂಥದ್ದು ಕೇಂದ್ರ ಸರ್ಕಾರದ್ದು. ಮತ್ತು ಕೇಂದ್ರ ಸರ್ಕಾರ ಅನುಸರಿಸತಕ್ಕಂತಹ ಆರ್ಥಿಕ ಧೋರಣೆಗಳ ಆಧಾರದ ಮೇಲೆ ದೇಶದಲ್ಲಿ ಬೆಲೆ ಏರಿಕೆ ಪರಿಸ್ಥಿತಿ ಬರುತ್ತದೆ ಹೊರತು ಅದಕ್ಕೆ ಯಾವುದೇ ಒಂದು ರಾಜ್ಯ ಸರ್ಕಾರ ಸಂಪೂರ್ಣ ಹೊಣೆಗಾರಿಕೆಯಾಗುವುದಿಲ್ಲ. ಆದರೆ ರಾಜ್ಯ ಸರ್ಕಾರದ ಪಾತ್ರ ಇಲ್ಲವೆಂದು ಹೇಳುವ ಪ್ರಶ್ನೆ ಅಲ್ಲ, ರಾಜ್ಯ ಸರ್ಕಾರದ ಪಾತ್ರವೂ ಇದೆ. ಆದರೆ ಅದು ಬಹಳ ಗೌಣವಾದ ಪಾತ್ರ. ಆದರೆ ಬಹಳ ಪ್ರಮುಖವಾದ ಪಾತ್ರ ಕೇಂದ್ರ ಸರ್ಕಾರದ್ದು. ಕೇಂದ್ರ ಸರ್ಕಾರವೂ ಕೂಡ ಹೇಗೆಂದರೆ, ತನ್ನ ಆಮದು, ರಫ್ತು ಉತ್ಪಾದನೆ ಮತ್ತು ವಿತರಣೆ ಮತ್ತು ಬೇಡಿಕೆ ಇವೆಲ್ಲದರ ಆಧಾರದ ಮೇಲೆ ಇರುತ್ತದೆ. ಇವತ್ತು ಬೆಲೆ ಏರಿಕೆಯ ಬಗ್ಗೆ ಮಾತನಾಡತಕ್ಕಂತಹ ಸಂದರ್ಭದಲ್ಲಿ ನಾವು ಇವತ್ತು ಪತ್ರಿಕೆಯಲ್ಲಿ ನೋಡಿದ್ದೇವೆ, ದೆಹಲಿಯಲ್ಲಿ ಈರುಳ್ಳಿ ಒಂದು ಕೇಜಿಗೆ 60 ರೂಪಾಯಿ ಇದೆ, ಎಣ್ಣೆ 45 ರಿಂದ 50 ರೂ. ಇದೆ. ಹಾಗಾದರೆ ಅಲ್ಲಿ ಯಾವ ಸರ್ಕಾರ ಇದೆ, ನಮ್ಮ ಬಿಜೆಪಿ ಪಕ್ಷದ ಸ್ನೇಹಿತರೂ ಕೂಡ ಒಂದು ತಿಳಿಯಬೇಕಾಗುತ್ತದೆ, ಯಾವುದೇ ಒಂದು ರಾಜ್ಯ ಸರ್ಕಾರ ಬೆಲೆ ಏರಿಕೆಗೆ ನೇರವಾಗಿ ಹೊಣೆಯಲ್ಲ.

ಕೇಂದ್ರ ಸರ್ಕಾರ ಬಹಳ ಮುಖ್ಯವಾದ ಪಾಲು ಇದೆ. ಸಿರಾ ಘಟನೆಗೆ ಸಂಬಂಧಪಟ್ಟ ಹಾಗೆ ಚರ್ಚೆ ಮಾಡಿದ ಸಂದರ್ಭದಲ್ಲಿ ನಾನು ಬಹಳ ಪ್ರಮುಖವಾದ ವಿಷಯವನ್ನು ಪ್ರಸ್ತಾಪ ಮಾಡಿದೆ.

11.40 ಎ.ಎಂ

ಶಿರಾ ಘಟನೆಗೆ ಸಂಬಂಧಪಟ್ಟಂತೆ ಇಲ್ಲಿ ಚರ್ಚೆ ನಡೆದಂಥ ಸಂದರ್ಭದಲ್ಲಿ ನಾನೊಂದು ಪ್ರಮುಖವಾದಂಥ ವಿಚಾರವನ್ನು ಪ್ರಸ್ತಾಪ ಮಾಡಿದೆ. ಬಹುಶಃ ಅದನ್ನು ಹೆಚ್ಚಿನ ಜನರು ಗಮನಿಸಿದರೋ ಇಲ್ಲವೋ ನನಗೆ ಗೊತ್ತಿಲ್ಲ. ಅದೇನೆಂದರೆ ಓಪನ್ ಜನರಲ್ ಲೈಸೆನ್ಸಿಂಗ್ ಪಾಲಿಸಿಯಡಿಯಲ್ಲಿ ಈ ವರ್ಷ ಕೇಂದ್ರ ಸರ್ಕಾರ ಎಡಿಬಲ್ ಆಯಿಲನ್ನು ತಂದಿದೆ. ಇದನ್ನು ಈ ಪಾಲಿಸಿಯಡಿಯಲ್ಲಿ ಸೇರಿಸಿದೆ. ಈ ಕಾರಣದಿಂದಾಗಿ ಎಣ್ಣೆಯ ದರ ಹೆಚ್ಚಲು ಪ್ರಮುಖವಾದಂಥ ಕಾರಣವಾಗಿದೆ. ಆದರೆ ಓ.ಜಿ.ಎಲ್. ಎನ್ನೆತಕ್ಕಂಥದ್ದು ಶಾಶ್ವತವಾಗಿರತಕ್ಕಂಥದ್ದು. ಆದರೆ ಒಂದೊಂದು ವರ್ಷ ಒಂದೊಂದು ಐಟಂನ್ನು ತೆಗೆದು ಹೊಸ ಒಂದೊಂದು ಐಟಂನ್ನು ಇದರಲ್ಲಿ ಇನ್‌ಕ್ಲೂಡ್ ಮಾಡುತ್ತಾರೆ. ಈ ವರ್ಷ ಎಡಿಬಲ್ ಆಯಿಲನ್ನು ಇನ್‌ಕ್ಲೂಡ್ ಮಾಡಿದ್ದಾರೆ. ಬೇರೆಯವರಿಗೆ ಆಮದು ಮತ್ತು ರಫ್ತು ವಿಚಾರದಲ್ಲಿ ಸಂಪೂರ್ಣ ಅಧಿಕಾರವನ್ನು ಕೊಟ್ಟ ಕಾರಣದಿಂದಾಗಿ ನಮ್ಮ ದೇಶದಿಂದ ರಫ್ತಾಗುತ್ತಿದ್ದ ವಸ್ತುಗಳ ಮೇಲೆ ನಿರ್ಬಂಧವಾಯಿತು ಮತ್ತು ವಿದೇಶಗಳಿಂದ ಬರತಕ್ಕಂಥ ವಸ್ತುಗಳಿಗೆ ಅವರು ಬಾಗಿಲನ್ನು ತೆಗೆದರು. ಈ ಕಾರಣದಿಂದಾಗಿಯೇ ನಮ್ಮ ದೇಶದಲ್ಲಿ ಇಂದು ಎಣ್ಣೆಕಾಳುಗಳ ಮತ್ತು ಎಣ್ಣೆಯ ದರ ಅತಿ ಹೆಚ್ಚಾಗಿ ಬೆಳೆಯುತ್ತಿದೆ. ಈ ಕಾರಣದಿಂದಾಗಿಯೇ ನಮ್ಮ ರೈತರು ಅತಿ ಸಂಕಷ್ಟಕ್ಕೆ ಒಳಗಾಗಿದ್ದಾರೆ ಎಂದು ನಾನು ಹೇಳುತ್ತೇನೆ. ಇದನ್ನು ಕೇಂದ್ರ ಸರ್ಕಾರವೇ ಮಾಡಿರತಕ್ಕಂಥದ್ದು. ಇವರ ಆರ್ಥಿಕ ತಜ್ಞರೇ ಒಂದು ಕಡೆ ಏನು ಹೇಳುತ್ತಾರೆಂದರೆ.

Though Bombay Oil Seeds and Oil Exchange (BOOE) has been lobbying for the last five years for the re-introduction of future trading of Edible oil industry.

This is not my statement. It is a statement of economists who are supporting this Government. ಅಂದರೆ ಆ ಬಿಸಿನೆಸ್ ಕಮ್ಯುನಿಟಿ ಕಂಟಿನ್ಯ್ಯುಸ್ ಆಗಿ ಲಾಬಿ ಮಾಡಿದ್ದರಿಂದಲೇ ಈ ರೀತಿಯಾಗಿರುವುದು. ಹೀಗಾಗಿ ಇಂದು ಬೆಲೆ ಏರಿಕೆ ವಿಪರೀತವಾಗಿದೆ. ಬೆಲೆ ಏರಿಕೆಯ ಪ್ರಶ್ನೆಯ ಹಿನ್ನೆಲೆಯಲ್ಲಿ ಇವೊತ್ತು ಯಾರು ಅವಿಶ್ವಾಸ ನಿರ್ಣಯವನ್ನು ಮಂಡಿಸಿದ್ದಾರೋ ಆ ಕಾಂಗ್ರೆಸ್ ಮತ್ತು ಬಿ.ಜೆ.ಪಿ ಯವರಿಗೆ ನೈತಿಕವಾದಂಥ ಹಕ್ಕಿಲ್ಲ. ಏಕೆಂದರೆ ಬೆಲೆ ಏರಿಕೆಗೆ ಮೊದಲು ಕಾರಣ ಪಿ.ವಿ. ನರಸಿಂಹರಾವ್ ಸರ್ಕಾರ. ಏಕೆಂದರೆ 1991ರಲ್ಲಿ ಇವರು ಹೊಸ ಆರ್ಥಿಕ ಧೋರಣೆಗಳನ್ನು ಪ್ರಾರಂಭ ಮಾಡಿದರು. ಇವರ ನೇತೃತ್ವದ ಸರ್ಕಾರವೇ ಇದಕ್ಕೆ ಹೊಣೆಯಾಗುತ್ತದೆ. ಅದನ್ನು ಮುಂದುವರಿಸಿಕೊಂಡು ಹೋಗುತ್ತಿರುವ ಎಲ್ಲಾ ಕೇಂದ್ರ ಸರ್ಕಾರಗಳೂ ಕೂಡ ಇದಕ್ಕೆ ಹೊಣೆಯಾಗುತ್ತದೆ. ಅಂದರೆ ಯು.ಎಫ್. ಗೌರ್ನಮೆಂಟ್ ಮತ್ತು ಈಗಿರುವ ಬಿ.ಜೆ.ಪಿ ಸರ್ಕಾರ. ಈ ಕಾರಣದಿಂದಾಗಿ ಬೆಲೆ ಏರಿಕೆಗೆ ಕೇವಲ ರಾಜ್ಯ ಸರ್ಕಾರ ಸಂಪೂರ್ಣ ಹೊಣೆಯಾಗಲಾರದು. ಇನ್ನು ಎರಡನೆಯದಾಗಿ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿ ಸಂಪೂರ್ಣವಾಗಿ ಹದಗೆಟ್ಟಿದೆ

ಎನ್ನುವುದು ನನ್ನ ಅಭಿಪ್ರಾಯವೂ ಹೌದು ಮತ್ತು ಇದು ವಾಸ್ತವವೂ ಹೌದು. ಕರ್ನಾಟಕ ರಾಜ್ಯದ ಜನತೆ ಇಂದು ಮನೆಗಳಲ್ಲಿ ನಿಶ್ಚಿಂತೆಯಿಂದ ಮಲಗುವುದಕ್ಕೆ ಸಾಧ್ಯವಾಗುತ್ತಿಲ್ಲ. ಪ್ರತಿ ದಿನ ಪತ್ರಿಕೆಗಳಲ್ಲಿ ಕೊಲೆ, ದರೋಡೆ ಮತ್ತು ಲೂಟಿಯ ವಿಚಾರಗಳೇ ಪ್ರಕಟವಾಗುತ್ತಿದೆ. ಇದಲ್ಲದೇ ಡಕಾಯಿತರ ಹಾವಳಿ ಕೂಡ ಜಾಸ್ತಿಯಾಗುತ್ತಿರುವ ಬಗ್ಗೆ ಸುದ್ದಿಗಳು ಬರುತ್ತಿವೆ. ಹೀಗಾಗಿ ಜನರಿಗೆ ಈ ರಾಜ್ಯದಲ್ಲಿ ಯಾವುದೇ ರೀತಿಯಾದಂಥ ರಕ್ಷಣೆಯಿಲ್ಲ. ಮೊನ್ನೆ ಶಾಸಕರಾದ ಮಾದಪ್ಪನವರ ಮನೆ ಮೇಲೆ ಧಾಳಿಯಾಗಿರುವ ಬಗ್ಗೆ ಸದನದಲ್ಲಿ ಈಗಾಗಲೇ ಚರ್ಚೆಯಾಗಿದೆ. ಅದನ್ನು ಮತ್ತೆ ಹೇಳುವ ಅವಶ್ಯಕತೆಯಿಲ್ಲ. ಅಂದರೆ ಇಂದು ಶಾಸಕರಿಗೆ ಮತ್ತು ಸಾಮಾನ್ಯ ಜನರಿಗೆ ರಕ್ಷಣೆ ಸಿಗದ ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿ ಉದ್ಭವವಾಗಿದೆ. ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಬೇಕಾದ ವಿಚಾರದಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಸಂಪೂರ್ಣವಾಗಿ ವಿಫಲಗೊಂಡಿದೆ. ಇದರಲ್ಲಿ ಯಾವುದೇ ಅನುಮಾನವಿಲ್ಲ. ಇದಕ್ಕೆ ಬೇಕಾದರೆ ನಾವು ಸಾವಿರ ಸಾವಿರಗಟ್ಟಲೆ ಉದಾಹರಣೆಗಳನ್ನು ಕೊಡಬಹುದು. ಅಧ್ಯಕ್ಷರೆ, ನಾನು ತಮ್ಮ ಮೂಲಕ ಸದನದ ಗಮನಕ್ಕೆ ತರಬಯಸುವ ಒಂದು ವಿಚಾರವೆಂದರೆ x x x x

ಅಧ್ಯಕ್ಷರು : ರೆಡ್ಡಿಯವರೆ, ಉತ್ತರ ಪ್ರದೇಶದ ಅಸೆಂಬ್ಲಿಯವರು ಇಲ್ಲಿ ಯಾರೂ ಇಲ್ಲ. ಅದೂ ಅಲ್ಲದೇ ಅದನ್ನು ಇಲ್ಲಿ ಹೇಳುವುದು ಸೂಕ್ತವಲ್ಲ. ಹೀಗಿರುವಾಗ ನೀವೇಕೆ ಅದನ್ನು ಹೇಳುತ್ತೀರಿ. ದಯವಿಟ್ಟು ಅದನ್ನು ಹೇಳಬೇಡಿ. ಅದನ್ನು ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಉತ್ತರ ಪ್ರದೇಶ ರಾಜ್ಯದ ಬಗ್ಗೆ ಹೇಳುತ್ತಿಲ್ಲ. ಕಾನೂನು ಸುವ್ಯವಸ್ಥೆಯ ಪರಿಸ್ಥಿತಿ ಇಡೀ ದೇಶದಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಹೇಗಿದೆ ಎಂಬುದನ್ನು ಹೇಳುತ್ತಿದ್ದೇನೆ. ಹಾಗಾಗಿ ನಾವು ಕಾನೂನು ವ್ಯವಸ್ಥೆಯ ಪರಿಸ್ಥಿತಿ ಬಗ್ಗೆ ನಾವು ಒಂದು ರಾಜ್ಯ ಸರ್ಕಾರದ ಮೇಲೆ ಆರೋಪ ಮಾಡತಕ್ಕಂಥ ಸಂದರ್ಭದಲ್ಲಿ ನಾವು ಎಲ್ಲವನ್ನೂ ಕೂಡ ಸಮಗ್ರವಾಗಿ ಆಲೋಚನೆ ಮಾಡಬೇಕಾಗುತ್ತದೆ. ಇವರು ಕೂಡ ಕಾನೂನು ಸುವ್ಯವಸ್ಥೆಯನ್ನು ಕಾಪಾಡಲಿಲ್ಲ. ಆದುದರಿಂದ ಅವರ ಬಗ್ಗೆ ಟೀಕೆ ಮಾಡತಕ್ಕಂಥ ಸಂದರ್ಭದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಬಗ್ಗೆ ನಮ್ಮ ನಿಲುವೇನು? ನಾವು ಏನನ್ನು ಹೇಳಬೇಕು ಎಂಬುದೇ ಪ್ರಶ್ನೆ ಬಂದಿರತಕ್ಕಂಥದ್ದು. ಇಡೀ ಕರ್ನಾಟಕ ರಾಜ್ಯದಲ್ಲಿ ಇಂದು ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದುಬಿದ್ದಿದೆ.

ಅಧ್ಯಕ್ಷರು : ಒಂದ್ನಿಮಿಷ ರೆಡ್ಡಿಯವರೇ ಈಲ್ಡ್ ಆಗಿ, ಸುರೇಶ್ ಕುಮಾರ್‌ರವರು ನನ್ನ ಛೇಂಬರ್‌ಗೆ ಬಂದು ಕ್ರೈಮ್ ವಿಷಯಕ್ಕೆ ಸಂಬಂಧಪಟ್ಟಂತೆ ಸಾರ್ವಜನಿಕ ಮಹತ್ವವುಳ್ಳ ವಿಷಯವನ್ನು ಸದನದಲ್ಲಿ ಹೇಳಲು ಅನುಮತಿಯನ್ನು ಕೇಳಿದ್ದರು. ನಾನು ಅವರಿಗೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೆ. ಆದುದರಿಂದ ತಾವು ಒಂದ್ನಿಮಿಷ ಈಲ್ಡ್ ಆಗಿ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ಮೈಸೂರು ರಸ್ತೆಯಲ್ಲಿರುವ "ದಿ ಕ್ಲಬ್" ಬಗ್ಗೆ

+ ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೆ, ಶ್ರೀರಾಮರೆಡ್ಡಿಯವರು ರಾಜ್ಯದಲ್ಲಿ ಅದರಲ್ಲೂ ವಿಶೇಷವಾಗಿ ಬೆಂಗಳೂರಿನಲ್ಲಿ ಆಗುತ್ತಿರುವಂಥ ಕ್ರೈಮ್ ಬಗ್ಗೆ ಪ್ರಸ್ತಾಪ

x x x x ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.